ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಜನವರಿ ೧೯೪೩	ವರ್ಷ ೧೫. ಸಂ. ೧೦

ಮುಂಬಯಿ ಇಲಾಖೆಯಲ್ಲಿ ಶಿಕ್ಷಣ ಪ್ರಸಾರ

೧೯೩೯–೪೨

೧೯೩೯ನೆಯ ಇಸ್ವಿಯ ನೊವ್ಹೆಂಬರ ತಿಂಗಳ ೪ನೆಯ ತಾರೀಖಿ ಮುಂಬಯಿಯ ಗವ್ಹರ್ನರರಾಗಿದ್ದ ಮಾನ್ಯ ಸರ್ ರೋಜರ ಲುಮ್ಲೆ G.C.I.E. I. D. ಅವರು ತಮ್ಮ ನೆರವಿಗೆ ನಿಯಮಿತರಾದ ಅಧಿಕಾರಿಗಳ ಸಹಾಯದಿಂ ನಮ್ಮ ಇಲಾಖೆಯ ಆಡಳಿತೆಯನ್ನು ಪ್ರಾರಂಭಿಸಿದರು. ಅಂದಿನಿಂದ ಕಳೆದ ನೊವ್ಹೆಂಬರ ತಿಂಗಳ ೪ನೆಯ ತಾರೀಪಿಗೆ ಮೂರು ವರ್ಷಗಳು ತುಂಬಿದುವು ಈ ಅವಧಿಯಲ್ಲಿ ನಮ್ಮ ಇಲಾಖೆಯ ಪ್ರಗತಿಯು ಹೇಗೆ ಸಾಗಿದೆಯೆಂಬುದ ಸಂಹಾವಲೋಕನರೂಪವಾದ ಚಿಕ್ಕ ಪುಸ್ತಕವೊಂದನ್ನು ಮೊನ್ನೆ ಮೊನ್ನೆ ಸರಕಾರದವರು ಪ್ರಕಟಿಸಿದ್ದಾರೆ. ಅದರೊಳಗಿನ ನಮ್ಮ ವಿದ್ಯಾ ಇಲಾಖೆ ಸಂಬಂಧಿಸಿದ ಕೆಲವು ಮಾತುಗಳನ್ನು ಇಲ್ಲಿ ಕೊಟ್ಟಿರುವೆವು.

ಈ ಮೂರು ವರ್ಷಗಳ ಅವಧಿಯಲ್ಲಿ ಶಿಕ್ಷಣಪ್ರಸಾರ ಕಾರ್ಯವ ಸನ್ನಾಗಿಯೇ ಸಾಗಿರುವದು. ಮತ್ತು ವಿದ್ಯಾಖಾತೆಯಲ್ಲಿಯ ಸ್ವಾಭಾವಿಕವಾದ ಎಲ್ಲ ಚಟುವಟಿಕೆಗಳು ಸರ್ವತೋಮುಖವಾದ ಪ್ರಗತಿಯನ್ನು ಹೊಂದಿರುವವು

ವಿಶ್ವವಿದ್ಯಾಲಯ ವಿಭಾಗ— ಮುಂಬಯಿಯ ನಿತ್ಯವಿದ್ಯಾಲಯದವರ ೧೯೩೯ನೆಯ ಇಸ್ವಿಯಲ್ಲಿ ಯು. ಟಿ. ಸಿ. ಚಟುವಟಿಕೆಯನ್ನು ಜಿಳಯಿಸುವ

ಯೋಜನೆಯನ್ನು ಕೈಕೊಳ್ಳುವ ಸೂಚನೆಯನ್ನು ಸರಕಾರದ ಮುಂದಿರಿಸಿದರು. ೧೯೪೦ ರಲ್ಲಿ ಈ ಯೋಜನೆಯಂತೆ ೧೦೦ಕ್ಕೆ ೫೦ ರಂತೆ ಹೆಚ್ಚಿಸಲು ಹಿಂದುಸ್ತಾನ ಸರಕಾರದ ಅನುಮತಿಯು ದೊರೆದಿರುವದು. ಮತ್ತು ಅವರು ಅಪೇಕ್ಷಿಸಿದಂತೆ ಸೈನಿಕ ಶಿಕ್ಷಣದ ಬಗ್ಗೆ ಡಿಪ್ಲೋಮಾಗಳನ್ನು (Diploma in Military Studies) ಕೊಡುವ ಯೋಜನೆಯನ್ನು ಕೂಡ ಸರಕಾರದವರು ಒಪ್ಪಿಕೊಂಡಿದ್ದಾರೆ.

ಮಹಾರಾಷ್ಟ್ರ ವಿಶ್ವವಿದ್ಯಾಲಯದ ಯೋಜನೆಯನ್ನು ಕುರಿತು ಒಂದು ಶಿಕ್ಷಕ ಸಮಿತಿಯು ೧೯೪೨ ರಲ್ಲಿ ನಿಯಮಿಸಲ್ಪಟ್ಟಿದ್ದು ಅದು ೧೯೪೩ರಲ್ಲಿ ತನ್ನ ವರದಿಯನ್ನು ಒಪ್ಪಿಸಬೇಕೆಂದು ಗೊತ್ತಾಗಿದೆ.

ಕಾಯದೆಯ ಶಿಕ್ಷಣದ ವಿಷಯದಲ್ಲಿ ಹಿಂದಿನ ಮಂತ್ರಿಮಂಡಲದವರು ಪ್ರಾರಂಭಿಸಿದ ಯೋಜನೆಯನ್ನು ಪೂರ್ಣಮಾಡಲಾಗಿದೆ. ಸರಕಾರದ ಲಾ ಕಾಲೇಜವು ಸಂಪೂರ್ಣವಾಗಿದ್ದು ಅದು ತನ್ನ ಸ್ವಂತ ಕಟ್ಟಡದಲ್ಲಿಯೇ ಕಾರ್ಯ ನಡೆಯಿಸುತ್ತಿದೆ.

ಶಾರೀರಿಕ ಶಿಕ್ಷಣ—೧೯೩೮ ನೆಯ ಇಸ್ವಿಯ ಮೇ ತಿಂಗಳಲ್ಲಿ ನಿಯಮಿತವಾದ ಸಮಿತಿಯ ಸೂಚನೆಗಳೆಲ್ಲವನ್ನೂ ಕಾರ್ಯರೂಪಕ್ಕೆ ತರಲಾಗಿದೆ. ಶಾರೀರಿಕ ಶಿಕ್ಷಣವನ್ನು ಸಾಮಾನ್ಯ ಶಿಕ್ಷಣದ ಅಂಗವೆಂದೂ ಎಲ್ಲ ಬಗೆಯ ಶಿಕ್ಷಣ ಸಂಸ್ಥೆಗಳಲ್ಲಿ ಶಾರೀರಿಕ ಶಿಕ್ಷಣವನ್ನು ಅವಶ್ಯಕವಾಗಿ ಕೈಕೊಳ್ಳಬೇಕೆಂದೂ ನಿರ್ಣಯವಾಗಿದೆ.

ಮಾಧ್ಯಮಿಕ ಶಿಕ್ಷಣ— ಹೈಸ್ಕೂಲುಗಳಲ್ಲಿ ಕೈಗಾರಿಕೆಯ ಶಿಕ್ಷಣವನ್ನು ಪ್ರಾರಂಭಿಸಬೇಕೆಂಬ ಯೋಜನೆಯನ್ನು ಕೈಕೊಳ್ಳಲಾಗಿದೆ. ಒಕ್ಕಲುತನ, ಯಾಂತ್ರಿಕ ಶಿಕ್ಷಣ ಮತ್ತು ವ್ಯಾಪಾರ ವ್ಯವಸಾಯ ಈ ಮೂರು ವಿಭಾಗಗಳಲ್ಲಿ ಬರಿದ ವಿದ್ಯಾರ್ಥಿಗಳ ಸಲುವಾಗಿ ೧೯೪೩ ನೆಯ ಇಸ್ವಿಯಿಂದ ಸ್ವತಂತ್ರವಾದ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯನ್ನು ಏರ್ಪಡಿಸಲಾಗಿದೆ.

ಸಾಕ್ಷರತಾ ಪ್ರಸಾರದ ಶಾಲೆಗಳು— ನಿರಕ್ಷರತೆಯ ನಿವಾರಣೆಯ ಯೋಜನೆಯೊಂದು ೧೯೩೮-೩೯ ರಲ್ಲಿ ಪ್ರಾರಂಭಿಸಲ್ಪಟ್ಟಿತು. ಇಂಥ ಸಾಕ್ಷರತಾ ಪ್ರಸಾರದ ಶಾಲೆಗಳಿಗೆ ಸರಕಾರವು ಸ್ವತಂತ್ರವಾಗಿ ಸಹಾಯದ್ರವ್ಯವನ್ನುಕೊಟ್ಟಿದೆ. ಆರಂಭಕ್ಕೆ ಈ ಬಗೆಯ ಸರಕಾರವೇ ಗ್ಯಾರಂಟುಕೊಡುವ ಯೋಜನೆಯು ಒಂದೇ ವರ್ಷದ ಮಟ್ಟಿಗೆ ಎಂದು ಗೊತ್ತಾಗಿದ್ದರೂ ಅದೇ ಕ್ರಮವನ್ನೇ ಮುಂದೆಯೂ ಸಾಗಿಸಿದ್ದರಿಂದ ಇಂಥ ಸಂಸ್ಥೆಗಳ ಚಾಲಕರಿಗೆ ತಮಗೆ ತಕ್ಕಷ್ಟು ಸಹಾಯ ದ್ರವ್ಯವು ದೊರೆಯುವದೆಂಬ ಭರವಸೆಯುಂಟಾಗಿ ಅವು ಹೆಚ್ಚಾಗಿ ಮುಂದೆ

ಬಂದು ಕಾರ್ಯಾರಂಭ ಮಾಡಿವೆ. ಈ ವರ್ಷ ಆಯವ್ಯಯ ಪತ್ರಿಕೆಯಲ್ಲಿ ಈ ಕಾರ್ಯಕ್ರಮಕ್ಕಾಗಿ ೮,೧೧,೦೦೦ ರೂಪಾಯಿಗಳನ್ನು ತೆಗೆದಿಡಲಾಗಿದೆ.

ಸ್ಥಾನಿಕ ಅಧಿಕಾರೀ ಸಂಘಗಳಿಗೆ ಹೆಚ್ಚಿನ ಸಹಾಯದ್ರವ್ಯ— ಪ್ರಾಥಮಿಕ ಶಿಕ್ಷಣ ಪ್ರಸಾರದ ಯೋಜನೆಗಳಿಗಾಗಿ ಹೆಚ್ಚಿನ ಸಹಾಯದ್ರವ್ಯವನ್ನು ಕೊಡುವದಕ್ಕೆ ತುಂಬ ತೊಂದರೆಯಿದ್ದಿತು; ಇಷ್ಟೇ ಅಲ್ಲ, ೧೯೩೧ರಲ್ಲಿ ನೂರಕ್ಕೆ ೫ ರಂತೆ ಕಡಿಮೆಮಾಡಬೇಕಾಗಿ ಬಂದಿತ್ತು; ಮತ್ತು ಈ ಕಡಿಮೆ ಮಾಡುವ ಪ್ರಮಾಣವು ಮುಂದಿನ ವರ್ಷಗಳಲ್ಲಿ ನೂರಕ್ಕೆ ೮-೧೦-೧೯೪೨ ಯವರೆಗೂ ಹೋಗಿತ್ತು. ೧೯೩೮ರಲ್ಲಿ ಈ ಬಗೆಯ ಕಡಿತದ ಕ್ರಮವನ್ನು ಸಂಪೂರ್ಣ ನಿಲ್ಲಿಸಲಾಯಿತು. ೩೧-೩-೧೯೪೧ಕ್ಕೆ ಮುಗಿಯುವ ವರ್ಷದಲ್ಲಿ ಕೊಟ್ಟ ಸಹಾಯದ್ರವ್ಯವು ೬ ಲಕ್ಷಕ್ಕಿಂತಲೂ ಹೆಚ್ಚಾಗಿದ್ದು ನಡೆಯುವ ವರ್ಷದ ಅಂದಾಜ ಪತ್ರಿಕೆಯಲ್ಲಿ ಅದನ್ನು ೬೯೨ ಸಾವಿರಕ್ಕೆ ಏರಿಸಲಾಗಿದೆ.

ಪ್ರಾಥಮಿಕ ಶಿಕ್ಷಣದ ಒತ್ತಾಯದ ಕಾರ್ಯಕ್ರಮ— ಕಳೆದ ಎರಡು ವರ್ಷಗಳಲ್ಲಿ ಸರಕಾರವು ಧಾರವಾಡ, ಹುಬ್ಬಳ್ಳಿ, ಸೊಲ್ಲಾಪುರ ಮ್ಯುನಸಿಪಾಲಿಟಿಗಳಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸುವದಕ್ಕೆ ಅನುಮತಿಯನ್ನು ಕೊಟ್ಟಿದೆ. ಸುರತ ಮ್ಯುನಸಿಪಾಲಿಟಿಗೂ ಇದಕ್ಕಾಗಿ ತಗಲುವ ವೆಚ್ಚಕ್ಕಾಗಿ ತಕ್ಕಷ್ಟು ಸಹಾಯದ್ರವ್ಯವನ್ನು ಮಂಜೂರ ಮಾಡಿದೆ.

ಶಿಕ್ಷಕರ ಸಂಬಳ— ಇನ್ನು ಮುಂದೆ ಎರಡನೆಯ ವರ್ಷದ ಟ್ರೇಂಡ ಶಿಕ್ಷಕ ಶಿಕ್ಷಕಿಯರಿಗಾಗಿ ೫೫–೮–೩೦-೧–೪೦ ಈ ಸ್ಕೇಲನ್ನು ಗೊತ್ತುಪಡಿಸಿದ್ದು ಈ ಹೊಸ ಸ್ಕೇಲಿನ ಮೇರೆಗೆ ಸರಕಾರಕ್ಕೆ ೩೪೦ ಸಾವಿರ ರೂಪಾಯಿಗಳ ಹೆಚ್ಚಿನ ವೆಚ್ಚವು ತಗಲುವದೆಂದು ಗೊತ್ತಾಗಿದೆ.

ಕಟ್ಟಡಗಳಿಗಾಗಿ ಸಹಾಯ ದ್ರವ್ಯ— ನಮ್ಮ ಇಲಾಖೆಯಲ್ಲಿ ಪ್ರತಿಜಿಲ್ಲೆಗೆ ಒಂದರಂತೆ ೨೦ ಶಾಲಾ ಕಟ್ಟಡಗಳ ಸಮಿತಿಯನ್ನು ನಿಯಮಿಸಿ ಅದಕ್ಕೆ ಸಹಾಯದ್ರವ್ಯವನ್ನು ಕೊಡುವದಕ್ಕಾಗಿ ೧೯೪೦-೪೧ರಲ್ಲಿ ೩೦೯ ಸಾವಿರ ರೂಪಾಯಿಗಳನ್ನೂ ಮುಂದಿನ ವರ್ಷ ೨೫೫ ಸಾವಿರ ರೂ.ಗಳನ್ನೂ ವೆಚ್ಚ ಮಾಡಲಾಯಿತು. ವರ್ಧಾ ಶಿಕ್ಷಣ ಯೋಜನೆಯ ಶಾಲಾ ಕಟ್ಟಡಗಳಿಗಾಗಿ ಆ ವರ್ಷ ೧೩೫೦೦ ರೂ. ಗಳನ್ನು ಕೊಟ್ಟಿದೆ. ನಡೆಯುವ ವರ್ಷದಲ್ಲಿ ಸಾಮಾನ್ಯ ಪ್ರಾಥಮಿಕ ಶಾಲಾ ಕಟ್ಟಡಗಳಿಗಾಗಿ ೭೫ ಸಾವಿರ ರೂ. ಗಳನ್ನೂ ವರ್ಧಾ ಯೋಜನೆಯ ಶಾಲೆಗಳ ಕಟ್ಟಡಗಳಿಗಾಗಿ ೨೦ ಸಾವಿರ ರೂ. ಗಳನ್ನು ಮಂಜೂರ ಮಾಡಿದೆ.

ಹಿಂದುಳಿದ ವರ್ಗಗಳ ಶಿಕ್ಷಣ— ಸರಕಾರದ ಇಲ್ಲವೆ ಸರಕಾರೇತರ ಸಂಸ್ಥೆಗಳ ಟ್ರೇನಿಂಗ್ ಕಾಲೇಜಗಳಿಗೆ ಹೋಗುವ ಹಿಂದುಳಿದ ವರ್ಗಗಳ ಶಿಕ್ಷಕರಿ

ಗಾಗಿ ೧೫, ಶಿಕ್ಷಕಿಯರಿಗಾಗಿ ೧೦, ಸ್ಕಾಲರಶಿಪ್ಪುಗಳನ್ನು ಮಂಜೂರ ಮಾಡಿದೆ. ಮತ್ತು ಹಿಂದುಳಿದ ವರ್ಗಗಳ ಉಮೇದುವಾರರನ್ನು ಆರಿಸಿಕೊಳ್ಳುವ ಖಾಸಗಿ ಶಿಕ್ಷಕ ಶಿಕ್ಷಣಾಲಯಗಳಿಗೆ ಸಹಾಯ ದ್ರವ್ಯವನ್ನು ಕೊಡುವದಕ್ಕಾಗಿ ವರ್ಷಕ್ಕೆ ೧೬೦೦ ರೂ. ಗಳನ್ನು ತೆಗೆದಿಟ್ಟಿದೆ.

ವರ್ಧಾಯೋಜನೆಯ ಶಿಕ್ಷಣ— ಈ ಕ್ರಮದಿಂದ ಕೆಲಸಮಾಡುವ ೬೦ ಶಾಲೆಗಳು ನಮ್ಮ ಇಲಾಖೆಯಲ್ಲಿ ನಡೆದಿವೆ. ಈ ಬಗೆಯ ಶಿಕ್ಷಣ ಪ್ರಸಾರಕ್ಕೆ ಜನತೆಯ ಬೆಂಬಲವಿದ್ದಂತೆ ಕಾಣಲಿಲ್ಲ. ಅದಕ್ಕಾಗಿ ಒಂದು ಮಧ್ಯವರ್ತಿ ಸಮಿತಿಯು ಸ್ಥಾಪಿತವಾಗಿ ಅದರ ಸದಸ್ಯರು ಈ ಬಗೆಯ ಶಾಲೆಗಳನ್ನು ಸಂದರ್ಶಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಗೊತ್ತಾಗಿದೆ.

ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರ ಟ್ರೇನಿಂಗು— ೨೨ ರಿಂದ ೪೦ ವರ್ಷಗಳ ಒಳಗಿನ ಎಲ್ಲ ಶಿಕ್ಷಕರೂ ಎರಡು ವರ್ಷಗಳ ಟ್ರೇನಿಂಗ್ ಪಡೆಯಲೇ ಬೇಕೆಂದು ೧೯೩೯ ರಲ್ಲಿ ಸರಕಾರವು ನಿರ್ಣಯಿಸಿತು. ಎಷ್ಟೋ ಜನ ಶಿಕ್ಷಕರು ಈ ಸಾಮಾನ್ಯ ನಿಯಮವನ್ನು ತಮ್ಮ ಬಡತನದ ಮೂಲಕ ಒಪ್ಪಿಕೊಳ್ಳಲಿಲ್ಲ. ಈ ತೊಂದರೆಯ ನಿವಾರಣೆಗಾಗಿ ೧೯೪೦ನೆಯ ಜನವರಿ ತಿಂಗಳಿನಲ್ಲಿ ಇಂಥ ಶಿಕ್ಷಕರು ಟ್ರೇನಿಂಗ್ ಕಾಲೇಜದಲ್ಲಿರುವಾಗ ಅವರಿಗೆ ಮೊದಲು ಕೆಲಸದ ಮೇಲಿದ್ದಾಗ ದೊರೆಯುವ ಸಂಬಳವೇ ದೊರೆಯಬೇಕೆಂದು ಸರಕಾರವು ಗೊತ್ತು ಮಾಡಿತು. ಆದರೆ ಎಷ್ಟೋ ಸ್ಥಾನಿಕ ಅಧಿಕಾರೀ ಸಂಘಗಳು ಈ ಯೋಜನೆಯನ್ನು ಮನ್ನಿಸಲಿಲ್ಲ; ಸರಕಾರದವರು ಅವರ ಮನವೊಲಿಸುವದಕ್ಕೆ ಎಷ್ಟೋ ಪ್ರಯತ್ನ ಮಾಡಿದರು; ಅದೆಲ್ಲ ವ್ಯರ್ಥವಾಯಿತು. ಇನ್ನು ಪ್ರಾಥಮಿಕ ಶಿಕ್ಷಣದ ಕಾಯಿದೆಯ ನಿಯಮಗಳಲ್ಲಿಯೇ ಬದಲು ಮಾಡುವ ಮಾರ್ಗವೊಂದು ಮಾತ್ರ ಸರಕಾರದ ಕೈಯಲ್ಲುಳಿದ ಕೊನೆಯ ಉಪಾಯವಾಗಿತ್ತು. ಸರಕಾರವು ಈ ಕೊನೆಯ ಉಪಾಯವನ್ನು ಕೈಕೊಂಡು ಇಂಥ ಒಟ್ಟು ವೆಚ್ಚದಲ್ಲಿ ತಾವು ೫೦ ವನ್ನೂ ಲೋಕಲ್ ಅಥಾರಿಟಿಯವರು ೫೦ ವನ್ನೂ ಕೊಡಬೇಕೆಂದು ನಿರ್ಣಯಿಸಿದರು.

ಲೋಕ ಶಾಲೆಗಳು— ಪ್ರಾಥಮಿಕ ಶಾಲೆಗಳ ಅಭ್ಯಾಸವನ್ನು ಮುಗಿಸಿ ಇಂಗ್ಲಿಷು ಅಭ್ಯಾಸಕ್ಕೆ ಹೋಗಲಾರದ ವಿದ್ಯಾರ್ಥಿಗಳ ಸರ್ವಸಾಮಾನ್ಯ ಯೋಗ್ಯತೆಯನ್ನು ಬೆಳೆಯಿಸುವ ಲೋಕ ಶಾಲೆಗಳನ್ನು ಪ್ರಾರಂಭಿಸುವ ಯೋಜನೆಯನ್ನು ಸರಕಾರದವರು ಒಪ್ಪಿಕೊಂಡಿದ್ದಾರೆ. ಮಾಧ್ಯಮಿಕ ಸಾಲೆಗಳ ಇಂಗ್ಲಿಷನ್ನುಳಿದ ಎಲ್ಲ ವಿಷಯಗಳ ಅಭ್ಯಾಸದಷ್ಟೇ ಅಭ್ಯಾಸವನ್ನು ದೇಶ ಭಾಷೆಯಲ್ಲಿಯೇ ಕಲಿಸಿ ವಿದ್ಯಾರ್ಥಿಗಳ ಯೋಗ್ಯತೆಯನ್ನು ಹೆಚ್ಚಿಸುವದೇ ಈ

ಯೋಜನೆಯ ಧ್ಯೇಯವು. ಈ ಕಾರ್ಯವನ್ನು ಕೈಕೊಳ್ಳುವದಕ್ಕಾಗಿ ಸ್ಥಾನಿಕ ಅಧಿಕಾರೀ ಸಂಘಗಳೂ ಖಾಸಗೀ ಸಂಸ್ಥೆಗಳೂ ಮುಂದೆ ಬರಬೇಕಾಗಿದೆ.

ಹಿಂದುಸ್ತಾನಿ ಶಿಕ್ಷಣ— ಸರಕಾರದಿಂದ ಮಾನ್ಯತೆ ಪಡೆದ ಎಲ್ಲ ಶಾಲೆಗಳಲ್ಲಿ ಹಿಂದುಸ್ತಾನಿಯನ್ನು ಕಲಿಸಲೇಬೇಕೆಂದು ೧೯೩೮ ರಲ್ಲಿ ಗೊತ್ತಾಯಿತು. ಎಲ್ಲ ಸರಕಾರೀ ಮಾಧ್ಯಮಿಕ ಶಾಲೆಗಳಲ್ಲಿಯೂ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳಲ್ಲಿಯೂ ಹಿಂದುಸ್ತಾನಿಯನ್ನು ಕಲಿಸಲೇಬೇಕೆಂದು ನಿರ್ಬಂಧಪಡಿಸಲಾಗಿದೆ. ೧೯೪೪ ನೆಯ ಇಸ್ವಿಯ ಜುಲೈ ತಿಂಗಳಿಂದ ಈ ನಿಯಮವನ್ನು ಎಲ್ಲ ಮಾಧ್ಯಮಿಕ ಶಾಲೆಗಳಿಗೂ ಕಡ್ಡಾಯವಾಗಿ ಜಾರಿಯಿಸಬೇಕೆಂದು ಗೊತ್ತಾಗಿದೆ.

ಈ ಬಗೆಯಾಗಿ ಮುಂಬಯಿ ಸರಕಾರವು ಈಗಿನ ಮಹಾಯುದ್ಧದಂಥ ಕಠಿಣ ಪರಿಸ್ಥಿತಿಯಲ್ಲಿಯೂ ಕೂಡ ತನಗೆ ಸಾಧ್ಯವಿದ್ದ ಎಲ್ಲ ಬಗೆಯಿಂದಲೂ ಶಿಕ್ಷಣ ಪ್ರಸಾರಕ್ಕೆ ಪ್ರಯತ್ನಿಸಿದ್ದು ತುಂಬ ಶ್ರೇಯಸ್ಕರವೆಂಬುದನ್ನು ಪುನಃ ಹೇಳಬೇಕಾಗಿಲ್ಲವಷ್ಟೇ ?

ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು

ಕಳೆದ ತಿಂಗಳ ಅಂಕವು ಹೊರಟ ಬಳಿಕ ನಮ್ಮ ಕಾಲೇಜದಲ್ಲಿ ನಡೆದ ಮುಖ್ಯ ಚಟುವಟಿಕೆಯೆಂದರೆ ಈಗ ಸೇವಾನಿವೃತ್ತರಾಗಿರುವ ಕುರಡಿ ನಾರಾಯಣರಾಯರ ಸನ್ಮಾನಾರ್ಥವಾಗಿ ನಡೆದ ಸಭೆ ಸಮಾರಂಭ ಸತ್ಕಾರಕೂಟಗಳು.

ಶ್ರೀ. ನಾರಾಯಣರಾಯರು ತಮ್ಮ ಆಯುಷ್ಯದ ಬಹುಭಾಗವನ್ನು—ಮುಖ್ಯ ಭಾಗವನ್ನು—ಈ ಶಿಕ್ಷಣಾಲಯದಲ್ಲಿಯೇ ಕಳೆದರು. ಇವರಿಂದ ಅಮಿತ ಶಿಷ್ಯ ಗಣವು ಪ್ರತಿಸ್ಫೂರ್ತಿಯನ್ನು ಹೊಂದಿತು. ಇಂಥ ಸಮರ್ಥರು ಸೇವಾನಿವೃತ್ತರಾದ ತರುವಾಯ ಧಾರವಾಡದಲ್ಲಿಯೇ ಉಳಿಯುತ್ತಲಿದ್ದರೂ ಕೂಡ ತಮಗಾಗಿರುವ ಕೊರಗನ್ನೂ ಸ್ನೇಹ ವಿಶ್ವಾಸ ಪ್ರೇಮ ಭಕ್ತಿಗಳನ್ನು ವ್ಯಕ್ತಪಡಿಸಲು ಟ್ರೇ. ಕಾಲೇಜ ಪ್ರಾಕ್ಟಿಸಿಂಗ್ ಸ್ಕೂಲುಗಳ ಶಿಕ್ಷಕರು, ಕಾಲೇಜದ ಎಲ್ಲ ವಿದ್ಯಾರ್ಥಿಗಳು, ವಸತಿಗೃಹದಲ್ಲಿರುವ ವಿದ್ಯಾರ್ಥಿಗಳು, ಪ್ರಾಕ್ಟಿಸಿಂಗ್ ಸ್ಕೂಲಿನ ಶಿಕ್ಷಕರು, ವಸತಿಗೃಹದ ನೌಕರ ಜನರು ಇವರೆಲ್ಲರೂ ಬೇರೆ ಬೇರೆಯಾಗಿ ಅನೇಕ ಸತ್ಕಾರ ಕೂಟಗಳನ್ನು ಏರ್ಪಡಿಸಿದ್ದರು. ಅವೆಲ್ಲವುಗಳ ವಿವರಗಳನ್ನು ಇಲ್ಲಿ ಕೊಡಲಿಕ್ಕಾಗ

ದಿದ್ದರೂ ಈ ಸಂದರ್ಭದಲ್ಲಿ ಕಾಶೀಜದ ಗುರುಗಳು ನುಡಿದ ಎರಡು ನುಡಿಗಳನ್ನು ಮಾತ್ರ ಇಲ್ಲಿ ಕೊಡುವೆನು.

ಶಿಕ್ಷಣಶಾಸ್ತ್ರದ ಅಧ್ಯಾಪಕರಾದ ಶ್ರೀಮಾನ್ ಬೈಜವಾಳ ಶ್ರೀನಿವಾಸರಾಯರು ಇಂಥ ಸಭೆಯೊಂದರ ಅಧ್ಯಕ್ಷಸ್ಥಾನದಲ್ಲಿದ್ದು — "ಶ್ರೀ. ಕುರಡಿ ಅವರಲ್ಲಿ ಏನು ವಿಶೇಷವಿದೆ? ಹೀಗೆ ನನ್ನನ್ನು ಕೇಳುವವರಿಗೆ, ಅವರಲ್ಲಿ ಏನು ಇಲ್ಲ? ಯಾವ ಕೊರತೆಯಿದೆ? ಅದನ್ನು ನೀವು ಮೊದಲು ಹೇಳಿರಿ; ಆ ಬಳಿಕ ಅವರು ಏನು ಇದ್ದಾರೆಂಬುದನ್ನು ನಾನು ಹೇಳುವೆನು; ಎಂದು ಪ್ರತ್ಯುತ್ತರವನ್ನು ಕೊಡುವೆನು. ಈ ಶಿಕ್ಷಣ ಸಂಸ್ಥೆಯ ಯಾವ ಕೆಲಸವೂ ಅವರ ಸಲಹೆ ಸಹಕಾರಗಳಿಲ್ಲದೆ ಇದು ವರೆಗೆ ನಡೆಯಲಿಲ್ಲ. ಹಾಗೆ ನಡೆಯಿಸತೊಡಗಿದರೆ ಅದು ತೃಪ್ತಿಕರವಾಗುತ್ತಿರಲಿಲ್ಲ. ಏನೋ ಕಳೆದುಕೊಂಡಂತೆ ಅನಿಸುತ್ತಿತ್ತು." ಎಂದು ಅಪ್ಪಣೆಕೊಡಿಸಿದರು.

ಮಾನಸಶಾಸ್ತ್ರದ ಅಧ್ಯಾಪಕರಾದ ಶ್ರೀಮಾನ್ ವ್ಹಿ. ಕೆ. ಜವಳಿ ಅವರು — "ಅನುಭವಂಶಿಕತೆ ಹಾಗು ಪರಿಸ್ಥಿತಿ ಇವುಗಳ ಮೇಲಾಟಗಳ ಮಧ್ಯದಲ್ಲಿ ಕರ್ತೃತ್ವ ಶಕ್ತಿಗೆ ಒಂದು ಮಹತ್ವದ ಸ್ಥಾನವಿದೆ. ಇಂಥ ಶಕ್ತಿಯ ವಿಶಿಷ್ಟತೆಯನ್ನು ನಮ್ಮ ಕನ್ನಡ ನಾಡಿನಲ್ಲಿಯ ಪೂಜ್ಯರಾದ ಹಡ್ಲೇಕರ ಮಂಜಪ್ಪನವರಲ್ಲಿಯೂ ದಿವಂಗತ ಪಂಡಿತ ತಾರಾನಾಥರಲ್ಲಿಯೂ ಕಂಡಂತೆ ಶ್ರೀಮಾನ್ ಕುರಡಿ ಅವರಲ್ಲಿಯೂ ಕಂಡಿರುವೆನು." ಎಂದರು.

ಹಿರಿಯರಂತೆ ಕಿರಿಯರಾದ ಪ್ರ್ಯಾಕ್ಟಿಸಿಂಗ್ ಸ್ಕೂಲಿನ ಬಾಲಕರು ಸಹ ಈ ಸತ್ಕಾರ ಸಮಾರಂಭಗಳಲ್ಲಿ ತಮ್ಮ ಮುದ್ದುಮುದ್ದಾದ ತೊದಲ್ನುಡಿಗಳನ್ನು ನುಡಿದಿದ್ದಾರೆ. ಅವರು ಹಾಡಿದ ಒಂದು ಹಾಡು ಹೀಗಿದೆ.

(ಶ್ರೀ. ಬೇಂದ್ರೆ ಅವರ 'ಬಿಡುಗಡೆ' ಎಂಬ ಹಾಡಿನ ಸಮರಾಗ ಸಮತಾಳಗಳಲ್ಲಿ)

ಬಲು | ಸುಖಿಯಾದಿರಿ ನಿಜವಾಗಿ
ಗುರು | ದೇವರ ಹರಸುವರಾಗಿ ‖ ಪಲ್ಲ ‖
ನೀವ್ ಪಡೆದಿರಿ ಜೀವರಿನ ಧನವ |
ಎಂ | ದೆಂದೂ ದಣಿಯದ ತನುವ |
ಪರ | ಹಿತದಿಂ ತುಂಬಿದ ಮನವ
ಹಿರಿ | ದಾಗಿಹ ವಿದ್ಯಾಬಲವ
ಚಿರ | ಕಾಲ | ಬಾಲ | ಲೋಲ — ಬಲುಸುಖಿ..... ‖ ೧ ‖
ಕಲಿ — | ಸಲು ನೀವೇ ಬಲು ಮುಂದು
ಕವಿ | ಬಳಗದಿ ನಿಮ್ಮದೆ ಒಂದು

ಬರೆ | ವವರೊಳು ನೀವೇ ಮುಂದು
ಪರಿ | ಭಾವಿಸೆ ಬಡವರ ಬಂಧು

ಚಿರ | ಕಾಲ | ಬಾಳ | ಲೋಲ—ಬಲುಸುಖಿ..... ॥ ೨ ॥

ನೀವ್ | ಶಿಕ್ಷಣ ಮಂದಿರ ಮೂರ್ತಿ
ನಿಜ | ಶಿಷ್ಯರ ತನುಮನ ಪೂರ್ತಿ
ಈ | ಗಾಯಿತೆ ಸೇವೆಯು ಪೂರ್ತಿ
ಕರಿ | ನಾಡಿಗೆ ತಂದಿರಿ ಕೀರ್ತಿ

ಚಿರ | ಕಾಲ | ಬಾಳ | ಲೋಲ—ಬಲುಸುಖಿಯಾದಿರಿ..... ॥ ೩ ॥

ಬರಿ | ಮೂತಾಡದ ಮಾಂತ್ರಿಕರೆ
ಗುರಿ | ಸಾಧಿಪ ಕುರಡೀಯವರೆ
ಸರಿ ನುರಿತಿಹ ನಾರಾಯಣರೆ
ಮರೆ | ಯದಿರೈ ಪದ್ಮರುವರರೆ

ಚಿರ | ಕಾಲ | ಬಾಳ | ಲೋಲ—ಬಲುಸುಖಿ..... ॥ ೪ ॥

ಈ ರೀತಿಯಾಗಿ ಎಲ್ಲರೂ ಕೊಂಡಾಡಿದ ನುಡಿಗಳು ಮಿತಭಾಷಿಗಳಾದ ನಾರಾಯಣರಾಯರಿಗಷ್ಟೇ ಅತಿಶಯೋಕ್ತಿಯಾಗಿ ಕಂಡುವಲ್ಲವೆ ಪರರಿಗಿಲ್ಲ. ಅವರು ಉತ್ತರವಾಗಿ ನುಡಿದ ಸವಿನುಡಿಗಳ ಸಾರವು ಹೀಗಿದೆ.

" ತಾವು ಮಾಡಿದ ಸತ್ಕಾರಗಳಿಗಾಗಿ ನಾನು ತುಂಬ ಋಣಿಯಾಗಿದ್ದೇನೆ. ನಾವು ಬಣ್ಣಿಸಿದಷ್ಟು ಕಾರ್ಯವು ನನ್ನಿಂದ ಆಗಿದೆಯೋ ಇಲ್ಲವೋ ಎಂಬುದು ನಮಗೇ ಗೊತ್ತು. ಕೆರಿದನ್ನೆ ಹಿರಿದಾಗಿ ತಿಳಿಯುವ ತಮ್ಮ ಮನಸ್ಸು ದೊಡ್ಡದು. ನನ್ನಿಂದ ಆದುದೇನೊ ತುಸ ಕೆಲಸ. ಅದಾದರೂ ದೇವರ ಹಾಗೂ ನನ್ನ ಗುರು ಗಳ, ಮೇಲಧಿಕಾರಿಗಳ ಕೃಪೆಯಿಂದ; ಇಷ್ಟೇ ಅಲ್ಲ; ತಮ್ಮೆಲ್ಲರ ಸಹಾನುಭೂತಿ ಸಹಕಾರ್ಯಗಳಿಂದ. ಪ್ರಾಥಮಿಕ ಶಿಕ್ಷಕರ ಅಭ್ಯಾಸವೂ ಅವರ ಜ್ಞಾನ ಸಂಗ್ರಹವೂ ಬೆಳೆದು ಸಮಾಜದಲ್ಲಿಯ ಅವರ ಸ್ಥಾನವು ಮೇಲ್ತರದ್ದಾಗಬೇಕೆಂದು ನಾನು ಕೈಲಾದಮಟ್ಟಿಗೆ ಯತ್ನಿಸಿದ್ದೇನೆ. ಇನ್ನು ಮುಂದೆ ವಯೋಮಾನಕ್ಕೆ ತಕ್ಕಂತೆ ಅನುಸರಿಸಿ ವಿಶ್ರಾಂತಿಯನ್ನು ಹೊಂದುತ್ತಲಿದ್ದರೂ ತಾವು ಕರೆದಾಗ ತಮ್ಮೆಲ್ಲರ ಸೇವೆಗೆ ಸದಾ ಸಿದ್ಧನಾಗಿರುವೆನು."

ಈ ಬಗೆಯಾಗಿ ಎಲ್ಲರ ಒಲುಮೆಯನ್ನೂ ಮನ್ನಣೆಯನ್ನೂ ಪಡೆದ ನಾರಾಯಣರಾಯರ ಯಶಸ್ಸಿನ ಸೂತ್ರಗಳು ಯಾವವೆಂಬುದನ್ನು ಅವರು ನುಡಿದ ಮಾತುಗಳಲ್ಲಿಯೇ ಕೊಡುವೆನು.

೧. ನಾನು ಕಾಲೇಜದಲ್ಲಿ ಪಡೆದ ವಿದ್ಯೆಯನ್ನು ಮರೆಯದೆ ಮುಂದೆ ಹೆಚ್ಚಿನ ಪ್ರಯತ್ನದಿಂದ ಬೆಳೆಯಿಸಿ ಉಳಿಯಿಸಿ ತಿಳಿಸುತ್ತಲಿದ್ದೆ.

೨. ಮೇಲಧಿಕಾರಿಗಳು ಸಮಯಾನುಸಾರವಾಗಿ ಹೆಚ್ಚಿನ ಕೆಲಸಗಳನ್ನು ಹೇಳಿದಾಗ ನಾನು 'ಆಗಿಯೆ,' 'ಆಗದೆ' ಎಂದು, ಎಂದೂ ನುಡಿಯಲಿಲ್ಲ. ಅವನ್ನು ನನ್ನ ಕೈಲಾದಮಟ್ಟಿಗೆ ಏಕೆ! ಶಕ್ತಿಮೀರಿಯೆ ಮಾಡುತ್ತ ಬಂದಿರುವೆನು, ಆದರೆ ಎಂಥ ಪ್ರಸಂಗದಲ್ಲಿಯೇ ಆಗಲಿ, ಸ್ವಾಭಿಮಾನಕ್ಕೂ ಶೀಲಕ್ಕೂ ಬಾಧೆಯನ್ನು ತಂದುಕೊಂಡಿಲ್ಲ.

೩. ಮೇಲಧಿಕಾರಿಗಳ ಕೂಡಾಗಲೀ ಕೆಳಗಿನವರ ಕೂಡಾಗಲಿ ಘರ್ಷಣದ ಪ್ರಸಂಗವೇ ನನಗೆ ಬರಲಿಲ್ಲ. ಯಾರಿಗೂ ಕೇಡುಮಾಡಬೇಡಿಂದು ಪರರು ನನಗೆ ಬಹುಶಃ ಹೇಳುವದು ಬೇಡ. ನನ್ನ ಮನಸ್ಸೇ ನನಗೆ ಹೇಳುತ್ತಿದೆ. ನನಗೆ ತಿಳಿದಮಟ್ಟಿಗೆ ಯಾರಿಗೂ ಕೇಡುಮಾಡಿಲ್ಲವೆಂದು ನಂಬಿದ್ದೇನೆ.

೪. ತಕ್ಕಷ್ಟು ಯೋಗ್ಯತೆಯು ಬಂದ ಮೇಲೆಯೇ ಬರೆಯಬಹುದಾದುದನ್ನು ಮಾತ್ರ ಆರಿಸಿಕೊಂಡು ಬರೆಯಹತ್ತಿದೆನು. ಯೋಗ್ಯತೆಬಾರದೆ ಬರೆಯಹತ್ತಿದರೆ ಅದು ಏನೇನೋ ಆಗಿಬಿಡುತ್ತದೆ. ಬರೆವಣಿಗೆಯಲ್ಲಿ ಪ್ರಾಪ್ತಿಯ ಉದ್ದೇಶವನ್ನೇ ಮುಖ್ಯವಾಗಿಟ್ಟುಕೊಂಡಿಲ್ಲ.

೫. 'ನೀ ಮಾಡು, ನಾನು ನೋಡುತ್ತೇನೆ' ಎಂಬುದು ನನ್ನಲ್ಲಿ ಇಲ್ಲ. 'ನಾವಿಬ್ಬರೂ ಕೂಡಿಮಾಡೋಣ; ನಿಮ್ಮಿಂದ ಆಗದಿದ್ದರೆ ಬಿಡಿರಿ; ನಾನೇ ಮಾಡಿಬಿಡುತ್ತೇನೆ' ಎಂಬುದನ್ನೇ ಅನುಸರಿಸುವೆನು. ಬಹಳವಾಗಿ ಕೇಳುವೆನು; ನೋಡುವೆನು; ಹೆಚ್ಚಾಗಿ ಓದುವೆನು; ತುಸ ಮಾತಾಡುವೆನು; ಅದಕ್ಕೂ ತುಸ ಬರೆಯುವೆನು.

ಈಗ ನಾರಾಯಣರಾಯರು ತಮ್ಮ ಕೆಲಸಗಳನ್ನು ಇದೇ ಶಾಲೆಯ ಹಿರಿಯ ಶಿಕ್ಷಕರೂ ಅನುಭವಿಕರೂ ಶಾಂತರೂ ಆದ ಶ್ರೀ. **ಹಿರಿಯಮಹ. ಗುರುಸಿದ್ಧಯ್ಯ**ನವರಿಗೆ ಒಪ್ಪಿಸಿದ್ದಾರೆ. ಅವರಾದರು, ಕುರಡಿಯವರೂ ಅಧಿಕಾರಿಗಳೂ ಅಪೇಕ್ಷಿಸಿದಂತೆ ಹೆಡ್‌ಮಾಸ್ತರರ ಸ್ಥಳದ ಉಜ್ವಲಪರಂಪರೆಯನ್ನು ಕಾಯಲಿ. ಶ್ರೀ. ನಾರಾಯಣರಾಯರು ಹಿಂದಿನಂತೆ ಮುಂದೆಯೂ ನಮ್ಮ ಶಿಕ್ಷಕ ಶಿಕ್ಷಕಿಯರಿಗಾಗಿಯೂ ನಾಡುನುಡಿಗಳ ಉತ್ಕರ್ಷಕ್ಕಾಗಿಯೂ ಅತ್ಯಧಿಕವಾಗಿ ಪ್ರಯತ್ನಿಸುತ್ತಿರುವಂತೆ ದೇವರು ಅನುಗ್ರಹಿಸಿ, ಅವರಿಗೆ ತಕ್ಕ ಆಯುರಾರೋಗ್ಯಗಳನ್ನು ದಯಪಾಲಿಸಲಿ.

V. A. Samsi

ಬಿನ್ನಹ

ಜೆನ್ನ ಕನ್ನಡ ನಾಡ ಶಿಕ್ಷಕ |
ರನ್ನು ತಿದ್ದುವ ಹಿರಿಯ ಸಂಸ್ಥೆಯೆ |
ನಿನ್ನ ಸೇವೆಯ ಅವಧಿಯಿಂದಿಗೆ ಮುಗಿದುದೌ ತಾಯೆ ||
ಎನ್ನ ಶಿಕ್ಷಕ ಬಂಧು ವೃಂದವೆ, |
ಜೆನ್ನಿಗರೆ, ಅಧಿಕಾರಿ ವರ್ಗವೆ |
ಎನ್ನ ಜೀವನದಲ್ಲಿ ನಿಮ್ಮುಪಕಾರವತಿಯಾಯ್ತು ॥ ೧ ॥

ಹೊನ್ನ ಕೊಡವಾದರೆಯು ಮೇಲಕೆ |
ತನ್ನ ತಾನೇ ಹತ್ತಿ ಬರುವುದೆ ? |
ಕಣ್ಣಿಯಿಲ್ಲದೆ, ಹಗ್ಗವಿಲ್ಲದೆ, ಎತ್ತಿ ಸೆಳೆಯದಲೆ ||
ಎನ್ನ ಗುಣಕಣಗಳನು ಪರ್ವತ |
ವನ್ನೆ ಗೈದಿರಿ, ಲೋಪ ದೋಷಗ |
ಳನ್ನು ಮರೆದಿರಿ, ಉನ್ನತೋನ್ನತ ಪದವಿಗೆತ್ತಿದಿರಿ ॥ ೨ ॥

ಹೊನ್ನು ಹೆಣದೊಡನಿಲ್ಲೆ ಉಳಿವುದು |
ಜೆನ್ನೆ ಸತಿ ಸುತರೊಡನೆ ಬಾರರು |
ತನ್ನ ಧರ್ಮಾಧರ್ಮ ಜೀವನ ಪುಣ್ಯಪಾಪಗಳು ||
ಬೆನ್ನ ಬಿಡದನುಸರಿಸಿ ಬರುವುವು |
ಇನ್ನು ಯೋಗ್ಯಾಯೋಗ್ಯ ಕಾರ್ಯೋ– |
ತ್ಪನ್ನ ಕೀರ್ತ್ಯಪಕೀರ್ತಿಯಾಚಂದ್ರಾರ್ಕವುಳಿಯುವುದು ॥ ೩ ॥

ಕನ್ನಡದ ನುಡಿ ನಾಡ ಸೇವೆಯ– |
ಲೆನ್ನ ಶೇಷಾಯುಷ್ಯ ಕಳೆಯಲು– |
ಯೆನ್ನುತೊಲವಿಂ ಹರಸಿ ಕಳುಹಿರಿ ನಿಮ್ಮ ಸೇವಕನ ||
ಕನ್ನಡಿಗರಡಿಯಾಳು ನೀನೆಂ– |
ದೆನ್ನುವಾ ಹೆಸರೆನಗೆ ಸಾಕಿನಿ– |
ತನ್ನೆ **ನಾರಾಯಣನು** ನೀಡುಗೆ ಹರಸಿ ಬೀಳ್ಕೊಡಿರಿ ॥ ೪ ॥

ತಾ॥ ೩೧–೧೨–೧೯೪೨ —**ನಾರಾಯಣ**

ಆದರ್ಶ ಶಿಕ್ಷಕರಾದ
ಶ್ರೀಮಾನ್ ಕುರಡಿ ನಾರಾಯಣರಾಯರು

ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿನ ಅಂಗವಾದ ಪ್ರಾಕ್ಟೀಸಿಂಗ್ ಸ್ಕೂಲಿನ ಜನಪ್ರಿಯ ಹೆಡ್‌ಮಾಸ್ತರರಾದ ಶ್ರೀಮಾನ್ ಕುರಡಿ ನಾರಾಯಣರಾಯರು ಇದೇ ತಿಂಗಳ ಆರಂಭದಲ್ಲಿ ಸೇವಾನಿವೃತ್ತರಾದರು. ಇವರು ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಈ ಶಿಕ್ಷಣಾಲಯಕ್ಕೆ ಒಂದಿಲ್ಲೊಂದು ರೀತಿಯಿಂದ ಸಂಬಂಧವುಳ್ಳವರಾಗಿದ್ದು ಕಳೆದ ೧೮–೧೯ ವರ್ಷಗಳಿಂದಂತೂ ಇಲ್ಲಿಯ ಪ್ರಾ. ಸ್ಕೂ. ನ ಮುಖ್ಯಾಧ್ಯಾಪಕರ ಸ್ಥಾನವನ್ನು ಅಲಂಕರಿಸಿದ್ದರು. ಇಷ್ಟು ದೀರ್ಘಕಾಲದ ಸ್ನೇಹ ಋಣಾನುಬಂಧಗಳ ಮೂಲಕ ಶ್ರೀ. ನಾರಾಯಣರಾಯರ ಅಗಲುವಿಕೆಯಿಂದ ಕಾಲೇಜಿನ ತೀರ ಕೆಳಗಿನ ತರಗತಿಯ ನೌಕರರನ್ನು ಮೊದಲುಗೊಂಡು ಯಾವತ್ತು ಜನರು ತುಂಬ ಅಸಮಾಧಾನಕ್ಕೆ ಒಳಗಾಗಿದ್ದಾರೆ. ನಾರಾಯಣರಾಯರು ಶಿಕ್ಷಣಕ್ಷೇತ್ರದಲ್ಲಿ ಪ್ರಸಿದ್ಧರಾದಂತೆ ಸಾಹಿತ್ಯಕ್ಷೇತ್ರದಲ್ಲಿಯೂ ಹೆಸರುವಾಸಿಯಾಗಿರುವದರಿಂದ ಕನ್ನಡ ಸಾಹಿತ್ಯಭಕ್ತರು, ಇನ್ನು ಈ ೫೫ ವರ್ಷ ವಯಸ್ಸಿನ ಹಿರಿಯರು ಹೊಟ್ಟೆಪಾಡಿನ ಊಳಿಗದಿಂದ ಬಿಡುಗಡೆಯಾಗಿ ತಾಯ್ನುಡಿಯ ಸೇವೆಯನ್ನು ಹೆಚ್ಚಾಗಿ ಮಾಡಲು ಶಿಕ್ಷಣಾಲಯದ ಸಂಕುಚಿತ ಗಡಿಯಿಂದ ಹೊರಗೆ ಬಂದರಲ್ಲ ! ಎಂದು ಆನಂದಪಡುತ್ತಲಿದ್ದಾರೆ. ಇಂತಹ ಮಹತ್ವದ ಸಂದರ್ಭದಲ್ಲಿ ಇವರ ಜೀವನದ ಮುಖ್ಯ ಅಂಶಗಳನ್ನು ವಿವರಿಸಿದರೆ ಅದು ಸಮಯೋಚಿತವೂ ಶಿಕ್ಷಕ ವೃಂದಕ್ಕೆ ಉದ್ಬೋಧಕವೂ ಆಗುವದೆಂಬ ನಂಬಿಕೆಯಿಂದ ಇಲ್ಲಿ ನಾಲ್ಕು ಮಾತುಗಳನ್ನು ಬರೆದಿರುವೆನು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರತೀರದಲ್ಲಿರುವ ಕರ್ಕಿ ಎಂಬ ಊರು ನಾರಾಯಣರಾಯರ ಜನ್ಮಸ್ಥಾನವು. ಇಲ್ಲಿಯೇ ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದರು. ಹೆಚ್ಚಿನ ಶಿಕ್ಷಣಕ್ಕಾಗಿ ಇವರಿಗೆ ಸರಸ್ವತಿಯ

ಒಲವು ಬೇಕಾದಷ್ಟು ಇದ್ದರೂ ಲಕ್ಷ್ಮಿಯ ಕೃಪೆಯು ಅಷ್ಟೊಂದು ನಿಲುಕದ್ದರಿಂದಲೋ ಇನ್ನಾವ ಆಂತರಿಕ ಪ್ರೇರಣೆಯಿಂದಲೊ ಶಿಕ್ಷಕ ವೃತ್ತಿಯನ್ನು ಒಪ್ಪಿಕೊಂಡು ೧೯೦೭ ರಲ್ಲಿ ಟ್ರೇನಿಂಗ್ ಕಾಲೇಜದ ಪ್ರವೇಶ ಪರೀಕ್ಷೆಗಾಗಿ ಧಾರವಾಡಕ್ಕೆ ಬಂದರು.

ನಾರಾಯಣರಾಯರ ಹುಟ್ಟು ಬೆಳೆವಣಿಗೆಗಳು ಆರ್ಥಿಕ ದೃಷ್ಟಿಯಿಂದ ಬಡತನದಲ್ಲಿಯೇ ಆದರೂ ಬಾಲ್ಯದ ಬೌದ್ಧಿಕ ಹಾಗು ಸಾಂಸ್ಕೃತಿಕ ಜೀವನವು ಮಾತ್ರ ಅಂಥ ಕೊರತೆಯ ಅಂಧಕಾರದಲ್ಲಿ ಮಸಕುಮಸಕಾಗಿ ಸಾಗಲಿಲ್ಲ. ಅವರ ಪೂರ್ವಪರಂಪರೆಯೂ ಉಜ್ವಲವಾಗಿದ್ದಿತು. ಅವರ ಹಿರಿಯರು ಆ ಕಾಲದಲ್ಲಿ ಕರ್ನಾಟಕದಲ್ಲಿಯೂ ಹೊರಗೂ ಅತ್ಯಂತ ಮಾನ್ಯತೆವೆತ್ತ ಯಕ್ಷಗಾನ ಕಲೆಯ ಪುರಸ್ಕರ್ತರು. ಪ್ರವಾಸ ಸೌಕರ್ಯಗಳ ಅಭಾವದ ಆ ಕಾಲದಲ್ಲಿ ಕೂಡ ಬಪ್ಪೋಜಿಯವರೆಗೂ ತಮ್ಮ ಯಕ್ಷಗಾನದ ಮೇಳದೊಂದಿಗೆ ಹೋಗಿ ಕಲಾಕುಶಲರೆಂದು ಮನ್ನಣೆವೆತ್ತ ಭಾಗವತೋತ್ತಮರು. ನಾಟಕ ಸಿನೇಮಾಗಳ ಪ್ರಾಬಲ್ಯದಿಂದ ಯಕ್ಷಗಾನವು ನಾಮಶೇಷವಾಗುತ್ತಿರುವ ಇಂದಿನಕಾಲದಲ್ಲಿಯೂ ಕೂಡ ಉತ್ತರ ಕನ್ನಡದಲ್ಲಿ ಅದರ ಹೆಸರು ಉಳಿಸಿಕೊಂಡಿರುವ ಶ್ರೇಯಸ್ಸಿಗೆ ಕರ್ಕಿಯ ಈ ಭಾಗವತರ ಮನೆತನವೇ ಮುಖ್ಯಕಾರಣವಾಗಿದೆ. ಇವರ ಮನೆಯಲ್ಲಿ ವರದ ವಿಠ್ಠಲನ ರಾಮಾಯಣ, ಕನ್ನಡಭಾರತ, ತುರಂಗ ಭಾರತ, ಜೈಮಿನಿಭಾರತ ಮುಂತಾದ ನಡುಗನ್ನಡದ ಕಾವ್ಯಗಳ ವಾಚನವು ಸದಾ ನಡೆಯುತ್ತಿದ್ದಿತು. ನೆರೆಹೊರೆಯ ಹೆಣ್ಣುಮಕ್ಕಳಿಗೆ ತಾಳೆಯೋಲೆಯಲ್ಲಿ ಬರೆದಿರುವ ಈ ಕಾವ್ಯಗಳನ್ನು ಓದಿ ಹೇಳುವ ಹಾಗು ಕಥಾಭಾಗವನ್ನು ವಿವರಿಸುವ ಕೆಲಸಗಳನ್ನು ಇವರ ತಾಯಿ ಶ್ರೀ. ಮಹಾಲಕ್ಷ್ಮಮ್ಮನು ಮಾಡುತ್ತಿದ್ದಳಂತೆ.

ನಾರಾಯಣರಾಯರಿಗೆ ಟ್ರೇನಿಂಗ್ ಕಾಲೇಜದಲ್ಲಿ ಉತ್ತಮವಾದ ಸ್ಥಿರ ಮುಹೂರ್ತದಲ್ಲಿಯೇ ಪ್ರವೇಶವಾದಂತಾಯಿತು. (೧೯೦೭) ಪ್ರವೇಶ ಪರೀಕ್ಷೆಯಲ್ಲಿಯೂ ಅದರ ಮುಂದಿನ ಮೊದಲನೆಯ ಎರಡನೆಯ ಮೂರನೆಯ ವರ್ಷಗಳ ಪರೀಕ್ಷೆಗಳಲ್ಲಿಯೂ ಮೊದಲನೆಯ ತರಗತಿಯಲ್ಲಿ ಮೇಲು ನಂಬರು ಪಡೆದು ಉತ್ತೀರ್ಣರಾದರು. ಆಗ ಕರ್ತವ್ಯದಕ್ಷರೂ ಶೀಲನಂಪನ್ನರೂ ಎಂದು ಹೆಸರು ಗಳಿಸಿದ್ದ ಜೋಶಿ ವಿನಾಯಕರಾಯರು ಕಾಲೇಜದ ಪ್ರಿನ್ಸಿಪಾಲರು. ಶ್ರೇಯುತರು ಮೇಲಾದ ಚಂದಾವರಕರ ಪದ್ಮನಾಭರಾಯರು, ಮಹಿಷಿ ರಾಮರಾಯರು, ಮುಗದಲ ವೆಂಕಟರಾಯರು, ಕನ್ನಡ ಪಂಡಿತ ಕಟ್ಟಿ ಮೂರ್ತ್ಯಾಚಾರ್ಯರು ಮೊದಲಾದ ಹೆಸರುವೆತ್ತ ಮಹನೀಯರು ಅಧ್ಯಾಪಕರು. ಇವರೆಲ್ಲರಿಗೆ ತಮ್ಮ ನಿರ್ಮಲವಾದ ನಡತೆ, ವಿಲಕ್ಷಣವಾದ ಚಟುವಟಿಕೆ, ಸಮಯಾನುಸಾರ-ಸ್ವಾಭಿಮಾನ ಪೂರ್ಣ ವಿಧೇಯತೆ ಇವುಗಳಿಂದಲೂ ಅಭ್ಯಾಸ-ವಿದ್ವತ್ತೆ-ಚಾತುರ್ಯಗಳ ಬಲ

ದಿಂದಲೂ ಇವರು ತುಂಬ ಪ್ರೀತ್ಯಾಸ್ಪದರಾದ ಶಿಷ್ಯರಾಗಿದ್ದರು. ಬೌದ್ಧಿಕ ಸಂಸ್ಕಾರಕ್ಕೆ ಸಂಬಂಧಿಸಿದ ಕನ್ನಡ, ಸಂಸ್ಕೃತ, ಗಣಿತ ಮುಂತಾದ ವಿಷಯಗಳಷ್ಟೇ ಅಲ್ಲದೆ, ಡ್ರಾಯಿಂಗು, ಬಡಿಗತನ ಮುಂತಾದ ಹಸ್ತಕೌಶಲ್ಯದ ವಿಷಯಗಳಲ್ಲಿಯೂ ಇವರಿಗೆ ಅಭಿರುಚಿಯಿದ್ದಿತು. ಕಾಲೇಜದಲ್ಲಿದ್ದಾಗ ಅವನ್ನೂ ಅಭ್ಯಾಸ ಪತ್ರಿಕೆಯ ಜೊರಗಿನ ಐಚ್ಛಿಕ ವಿಷಯವೆಂದು ಆರಿಸಿಕೊಂಡು ಕಲಿತು ಪರೀಕ್ಷೆ ಕೊಟ್ಟು ಉತ್ತಮ ತರಗತಿಯಲ್ಲಿ ಉತ್ತೀರ್ಣರಾಗಿರುವರು.

ಮೂರನೆಯ ವರ್ಷದ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಪ್ರತ್ಯಕ್ಷ ಪಾಠಕಲಿಸುವ ಪರೀಕ್ಷೆಯು ನಡೆದಾಗ ಪ್ರಕಟವಾದ ಶಿಕ್ಷಣ ಕಲಾಭಿರುಚಿಯೂ ಸ್ವಾಭಾವಿಕವಾದ ಹುಟ್ಟು ಪ್ರವೃತ್ತಿಯೂ ಇವರನ್ನು ಕಾಲೇಜದಿಂದ ಹೊರಗೆ ಕಳುಹಿಸದಿರಲು ಮುಖ್ಯ ಕಾರಣವಾದವು. ಆಗಿನ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಕರಂದೀಕರ ಸಾಹೇಬರೂ ಪ್ರಿನ್ಸಿಪಾಲರಾದ ಜೋಶಿ ವಿನಾಯಕರಾಯರೂ ಇವರು ಪಾಠ ಕೊಡುವ ಕ್ರಮವನ್ನು ನೋಡಿ ಸಂತೋಷಭರಿತರಾಗಿ, ಅತ್ಯುತ್ತಮ ಶಿಕ್ಷಕ (Very good teacher) ಎಂದು ಉದ್ಗಾರ ತೆಗೆದರಂತೆ! ಇವರು ತಮ್ಮ ವ್ಯಾಸಂಗಬಲದಿಂದ ಅಷ್ಟೇ ಅಲ್ಲದೆ ವಿವಿಧ ಚಟುವಟಿಕೆಗಳಲ್ಲಿಯ ಜಾಣ್ಮೆ, ತಮ್ಮದೇ ಆದ ಒಂದು ವಿಶಿಷ್ಟ ವ್ಯಕ್ತಿತ್ವ, ವಿಧಾಯಕತೆ ಮೊದಲಾದವುಗಳಿಂದ ಕಾಲೇಜದ ಅಧ್ಯಾಪಕರಿಗೂ ಪ್ರಿನ್ಸಿಪಾಲರಿಗೂ ತುಂಬ ಪ್ರಿಯರಾಗಿದ್ದರು. ಇವರ ಸಹಾಧ್ಯಾಯಿಗಳಾಗಿದ್ದು ಈಗ ಧಾರವಾಡ ಜಿಲ್ಲೆಯಲ್ಲಿ ಅಸಿ. ಡೆ. ಎ. ಇ. ರಾಗಿರುವ ಶ್ರೀ. ಜಾತಗೇರ ಸಾಹೇಬರೂ ಇವರೂ ಕೂಡಿಯೇ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿ ೧೯೧೦ ರಲ್ಲಿ ಕೆಲಸವನ್ನು ಕೈಕೊಂಡರು.

ಮುಂದೆ ತಿಂಗಳೊಪ್ಪತ್ತಿನಲ್ಲಿಯೆ ಆಗಿನ ಟ್ರೇ. ಕಾ. ದ ಮೊದಲನೆಯ ಅಸಿ. ರಾಗಿದ್ದ ಚಂದಾವರಕರ ಅವರು ಧಾರವಾಡದ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿ ನಿಯಮಿಸಲ್ಪಟ್ಟ ಸಂದರ್ಭದಲ್ಲಿ ತಮ್ಮ ಕೆಲಸವನ್ನು ತಾತ್ಪೂರ್ತಿಕವಾಗಿಯಾದರೂ ಎಡರುತೊಡರಿಲ್ಲದೆ ನಿರ್ವಹಿಸಲು ತಮ್ಮ ವಿದ್ಯಾರ್ಥಿ ಕುರಿಡಿಯವರೇ ಸಮರ್ಥರೆಂದು ಪ್ರತಿಪಾದಿಸಿ ಇವರಿಗೇ ಆ ಕೆಲಸವನ್ನು ಒಪ್ಪಿಸಿ ಹೋಗಿದ್ದರು. ಇದು ಒಂದೇ ತಿಂಗಳ ಮಟ್ಟಿಗಾದರೂ ಇವರ ಭವಿಷ್ಯದ ಉಜ್ವಲ ಜೀವನದ ಪೂರ್ವಸೂಚನೆಯಾಯಿತು; ಮತ್ತು ಇಂಥ ಮಹತ್ವದ ಕೆಲಸಕ್ಕೆ ಇವರು ಆಗಲೆ ತುಂಬ ಅರ್ಹತೆಯುಳ್ಳವರಾಗಿದ್ದರು, ಎಂಬ ದೃಷ್ಟಿಯಿಂದ ಅತಿ ಮಹತ್ವದ ಮಾತಾಗಿರುವುದರಿಂದ ಇಲ್ಲಿ ಹೇಳಿದೆ.

ನಾರಾಯಣರಾಯರು ತಮ್ಮ ವರ್ಗದ ಕೆಲಸವನ್ನೂ ಶಾಲೆಕಾಲೇಜುಗಳ ಹೆಚ್ಚಿನ ಕೆಲಸಗಳನ್ನೂ ಉತ್ಸಾಹದಿಂದಲೂ ಆಸ್ಥೆಯಿಂದಲೂ ಮಾಡಹತ್ತಿದರು.

ಈಗಾಗಲೆ ಕನ್ನಡ ಭಾಷಾ ವಿಷಯವನ್ನು ಹೆಚ್ಚಾಗಿ ಅಭ್ಯಾಸಮಾಡಿ ವರ್ಧ ಸಾಹೇಬರು ಇಟ್ಟ 'ವರ್ಧಪ್ರಾಯಿಜ' ಎಂಬ ಪಾರಿತೋಷಿಕವನ್ನು ೧೯೧೨ರಲ್ಲಿ ಪಡೆದಿದ್ದರು. ಗುರುವರ್ಯ ಉಮಡಿರಾಯರ ಸಲಹೆಯಂತೆ ಇಂಗ್ಲಿಷು ಭಾಷೆಯ ಅಭ್ಯಾಸವನ್ನು ಆರಂಭಿಸಿದರು. ಕಾಲೇಜದ ವಿದ್ಯಾರ್ಥಿಯಾಗಿದ್ದಾಗ ಕಲಿತ ಎಲ್ಲ ವಿಷಯಗಳ ಅಭ್ಯಾಸವನ್ನು ಮುಂದುವರಿಸಿದರು. ಇದರಿಂದ ಶಾಲೆಯ ಕೆಲಸವು ಬಲು ಪರಿಣಾಮಕರವಾಗಿ ಸಾಗಹತ್ತಿತು. ಹೀಗೆ ಆರೇಳು ವರ್ಷಗಳು ಕಳೆಯುವದರೊಳಗಾಗಿ ಪ್ರಾಪಂಚಿಕ ಅಡಚಣೆಗಳ ನೆವನದಿಂದ ದೈವವು ಇವರನ್ನು ಕಾರವಾರ ಜಿಲ್ಲೆಗೆ ಕರೆದೊಯ್ದಿತು. ಆಗ ಇವರು ತಮ್ಮ ಹಳದೀಪುರದಲ್ಲಿಯೇ ಇದ್ದುಕೊಂಡು ಶಾಲೆಯ ಕೆಲಸದೊಂದಿಗೆ ಸಾಹಿತ್ಯ ಸೇವೆ, ಸಾರ್ವಜನಿಕ ಹಿತದ ಚಟುವಟಿಕೆಗಳನ್ನು ಶಾಂತರೀತಿಯಿಂದ ನಡೆಯಿಸಿದ್ದರು. ಇವರ ಪ್ರೇರಣೆ ಹಾಗು ಮೇಲ್ವಿಚಾರಣೆಗಳ ಕೆಳಗೆ ಹಳದೀಪುರದಲ್ಲಿ ಸ್ಥಾಪಿತವಾದ ಉತ್ತರ ಕನ್ನಡ ಜಿಲ್ಲೆಯ **ಕ್ಷತ್ರಿಯ ವಿದ್ಯಾವರ್ಧಕ** ಸಂಘವು ಇಂದಿಗೂ ಜನಹಿತದ ಕಾರ್ಯದಲ್ಲಿ ನಿರತವಾಗಿದೆ.

ಹೀಗಿರುವಾಗ ಅಕಸ್ಮಾತ್ ಒಂದು ಸುಯೋಗವು ಒದಗಿತು. ಸರಕಾರದವರು ಟ್ರೇಂಡ್ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಲು ಬಯಸಿ ಶಿಕ್ಷಕ-ಶಿಕ್ಷಣಾಲಯಗಳನ್ನು ಮುಂಬಯಿ ಇಲಾಖೆಯಲ್ಲೆಲ್ಲ ಜಿಲ್ಲೆಗೊಂದರಂತೆ ತೆರೆಯಲು ಹೊರಟರು. ನಮ್ಮ ಭಾಗದಲ್ಲಿ ಮೊದಲು ಆರಂಭವಾದದ್ದು ವಿಜಾಪುರ ಜಿಲ್ಲೆಯ ಟ್ರೇನಿಂಗ್ ಸ್ಕೂಲು. ಇದರ ಮೊದಲನೆಯ ಅಸಿಸ್ಟಂಟರ ಸ್ಥಳಕ್ಕೆ ನಾರಾಯಣರಾಯರೇ ಯೋಗ್ಯರೆಂದು ದೈವವೇ ಅವರನ್ನು ಎತ್ತಿಹಿಡಿದಂತಾಯಿತು. ಆ ಟ್ರೇನಿಂಗ್ ಸ್ಕೂಲಿನ ಮುಖ್ಯಾಧ್ಯಾಪಕರಾದ ಶ್ರೀಯುತ ಮಗದಲ ವೆಂಕಟರಾಯರೂ ಮೆ. ವಕೀಲ ಸಾಹೇಬರೂ ಅಪೂರ್ವಶಕ್ತಿಯಿಂದ ಇವರನ್ನು ಸಮುದ್ರದ ತಳದಿಂದ ಮೇಲಕ್ಕೆ ಎತ್ತಿ ಸೆಳೆದುಕೊಂಡರು. ಸಮುದ್ರತೀರದಲ್ಲಿ ಶಾಂತರೀತಿಯಿಂದ ಕಾಲಕಳೆಯುವ ಇವರನ್ನು ಅಕಸ್ಮಾತ್ತಾಗಿ, ಇತಿಹಾಸ ಪ್ರಸಿದ್ಧವಾದ ವಿಜಾಪುರದಲ್ಲಿಯ ಟ್ರೇನಿಂಗ್ ಸ್ಕೂಲಿಗೆ ಬರುವಂತೆ ದೈವವಾಗಲಿ ಪರಿಸ್ಥಿತಿಯಾಗಲಿ ಎರಡೂ ಕೂಡಿಯೇ ಆಗಲಿ ಪ್ರೇರಿಸಿದವು. ಈ ಸಮಯದಲ್ಲಿ ವಿಜಾಪುರದ ಹೈಸ್ಕೂಲಿನ ಮುಖ್ಯಾಧ್ಯಾಪಕರಾದ ಮಹಿಷಿ ರಾಮರಾಯರು ಇವರಿಗೆ ನೀಡಿದ ನೆರವು ಅಷ್ಟಿಷ್ಟೆಂದು ಹೇಳಬರುವಂತಿಲ್ಲ. ಇಲ್ಲಿ ಮೂರು ವರ್ಷಗಳ ವರೆಗೆ ಉತ್ತಮ ಕೆಲಸಮಾಡಿ ವಿದ್ಯಾರ್ಥಿಗಳಿಗೂ ಅಧಿಕಾರಿಗಳಿಗೂ ಪ್ರಿಯರಾಗಿ ವಿಜಯಪುರದಲ್ಲಿ ನಿಜವಾಗಿಯೂ ವಿಜಯಿಗಳೇ ಆದ ನಾರಾಯಣರಾಯರು ಟ್ರೇನಿಂಗ್ ಸ್ಕೂಲಿನ ನೌಕರಿಯಿಂದ ತಟ್ಟನೆ ಹಿಂದಿರುಗಬೇಕಾ

ಯಿತು. ಯಾವ ದೈವಿಕ ಪ್ರೇರಣೆಯಿಂದ ಮೇಲಕ್ಕೆ ಹಾರಿದ್ದರೋ ಅದೇ ದೈವಿಕ ಗತಿಯಿಂದಲೇ ಕೆಳಗೆ ಇಳಿಯಬೇಕಾಯಿತು. ಸರಕಾರದವರು ಎಲ್ಲ ಜಿಲ್ಲೆಗಳ ಟ್ರೇನಿಂಗ್ ಸ್ಕೂಲುಗಳನ್ನು ಮುಚ್ಚಿಬಿಟ್ಟದ್ದೇ ಇದಕ್ಕೆ ಕಾರಣವು. ೧೯೨೨ ರಲ್ಲಿ ನಾರಾಯಣರಾಯರು ಧಾರವಾಡದ ಪ್ರಾಥ. ಸ್ಕೂ. ಲಿಗೆ ಪುನಃ ಅ. ಮಾಸ್ತರರಾಗಿ ಬರಬೇಕಾಯಿತು. ಈ ಕಾಲವು ಶಿಕ್ಷಣ ಸಂಸ್ಥೆಗಳಿಗೆ ದುರ್ಯೋಗದ ಕಾಲವೆಂದೇ ಹೇಳಬೇಕು. ಏಕೆಂದರೆ, ಆಗ ಎಲ್ಲ ಟ್ರೇನಿಂಗ್ ಸ್ಕೂಲುಗಳು ಮುಚ್ಚಿಹೋದುವಲ್ಲದೆ ಐದು ನೂರರ ವರೆಗೆ ವಿದ್ಯಾರ್ಥಿಗಳಿಂದ ಕಿಕ್ಕಿರಿದಿದ್ದ ಧಾರವಾಡದ ಟ್ರೇನಿಂಗ್ ಕಾಲೇಜವು ಕೂಡ ಕೇವಲ ೩೦-೩೫ ವಿದ್ಯಾರ್ಥಿಗಳಿಂದ ಕೂಡಿದ ಒಂದು ಟ್ರೇನಿಂಗ್ ಸ್ಕೂಲ್ ಎನಿಸಿಕೊಂಡು ಜೀವಹಿಡಿದು ಉಳಿಯಬೇಕಾದರೆ ಇಡಿಯ ಕರ್ನಾಟಕವೆ ತಲ್ಲಣಗೊಂಡು ಚಳುವಳಿಮಾಡಬೇಕಾಯಿತು. ಬಹುಕಾಲದಿಂದ ನಡೆದುಬಂದ ಈ ಶಿಕ್ಷಣಾಲಯದ ಬಾಗಿಲನ್ನು ಕೂಡ ಕೆಲವು ವರ್ಷ ಮುಚ್ಚಿಯೇಬಿಡಬೇಕೆಂದು ಸರಕಾರವು ಯೋಚಿಸುತ್ತಿರುವ ಆ ಕಾಲದಲ್ಲಿ ದೊಡ್ಡ ಟ್ರೇನಿಂಗ್ ಕಾಲೇಜವು ಚಿಕ್ಕ ಟ್ರೇನಿಂಗ್ ಸ್ಕೂಲಾಗಿಯಾದರೂ ಉಳಿಯುವಂತೆ ಮಾಡಿದ ಶ್ರೇಯಸ್ಸು ಮುಖ್ಯವಾಗಿ ದಿ. ಬ. ರೊದ್ದರಾಯರಿಗೆ ಸೇರಿದುದು.

ಇಂತಹ ಕಠಿಣ ಸಂದರ್ಭದಲ್ಲಿ ಇದ್ದುದರಲ್ಲಿಯೇ ಸಮಾಧಾನವ ಒಂದು ಸಂಗತಿಯೆಂದರೆ– ಕಾಲೇಜದ ಮಾನದಿಂದ ಪ್ರಾಕ್ಟೀಸಿಂಗ್ ಸ್ಕೂಲು ಕುಗ್ಗದೆ ಉಳಿದುಕೊಂಡಿದ್ದು. ೧೯೨೪ ರಲ್ಲಿ ಶ್ರೀ. ಕುರಡಿ ಅವರು ಇದರ ಮುಖ್ಯಾಧ್ಯಾಪಕರಾದರು. ಅಂದಿನಿಂದ ಒಂದೇಸವನೆ ೧೪–೧೯ ವರ್ಷಗಳ ವರೆಗೆ ಈ ಕೆಲಸವನ್ನು ಇವರು ಗಂಭೀರವಾಗಿ, ಸರ್ವರಿಗೂ ಪ್ರಿಯಕರವಾಗಿ ಮಾಡಿದರು. ಎಂಥ ಕಠಿಣ ಪ್ರಸಂಗದಲ್ಲಿಯೂ ಆ ಸಂಸ್ಥೆಯ ಹೆಸರಿನ ಉಜ್ವಲತೆಯನ್ನು ಕುಂದಿಸಲಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯು ದಿನದಿನಕ್ಕೆ ಹೆಚ್ಚುತ್ತಲೇ ಇದ್ದಿತು. ಮುಂದೆ ಪುನಃ ಟ್ರೇ. ಕಾ. ವು ಬೆಳವಣಿಗೆ ಹೊಂದಿದಾಗ ಪ್ರಾಥ. ಸ್ಕೂ. ನ ಅಸಿಸ್ಟಂಟರ ಸಂಖ್ಯೆಯು ೭ರಿಂದ ೧೩ ಆಯಿತು. ಇದೇ ನಾರಾಯಣರಾಯರು ಪ್ರಾಥ. ಸ್ಕೂ. ದಲ್ಲಿ ಉಪಶಿಕ್ಷಕರೆಂದು ಮೊಟ್ಟಮೊದಲು ನೌಕರಿಯನ್ನು ಆರಂಭಿಸಿದಾಗ ಶಾಲೆಯಲ್ಲಿ ವಿದ್ಯಾರ್ಥಿಗಳ ಕೊರತೆಯಿತ್ತು. ಇಲ್ಲಿಯ ಶಿಕ್ಷಕರು ಊರೊಳಗಿನ ವಿದ್ಯಾರ್ಥಿಗಳಿಗೆ 'ನಮ್ಮ ಶಾಲೆಗೆ ಬನ್ನಿರಿ' ಎಂದು ಮನೆ ಮನೆಗೆ ಹೋಗಿ, ಕರೆಯಬೇಕಾಗುತ್ತಿತ್ತು. ಆದರೆ ಇವರ ಜಾಣ್ಮೆಯಿಂದಲೂ ಕಾಲಗತಿಯಿಂದಲೂ ಇದೆಲ್ಲ ದೂರಾಯಿತಿಷ್ಟೇ ಅಲ್ಲ; ಈಚೆಗೆ ಸರಕಾರದವರು ಎರಡಾಣೆಗಳ ಬದಲು ಎಂಟು ಆಣೆ ಫೀ ತಕ್ಕೊಳ್ಳುವ ಕ್ರಮವನ್ನು ಆರಂಭಿಸಿದರೂ

ಹೊರಗಿನಿಂದ ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆಯನ್ನು ತಡೆದು ಹಿಡಿಯಬೇಕಾ
ಸಂದರ್ಭವೊದಗಿದೆ. ಹೊರಗಿನಿಂದ ಬರಬೇಕೆನ್ನುವ ಬಾಲಕರ ನೂರಾರು ಜ
ಪಾಲಕರನ್ನು ನಿರಾಶೆಗೊಳಿಸುವ ಕಷ್ಟಕರವಾದ ಬೇಸರದ ಸಂದರ್ಭ
ಮುಖ್ಯಾಧ್ಯಾಪಕರಿಗೆ ಒದಗಿದೆ. ಶಾಲೆಯು ಇಷ್ಟೊಂದು ಆಕರ್ಷಕವು
ಜನಪ್ರಿಯವೂ ಆಗಿರಲು ಪ್ರಾಸಂಗಿಕ ಮತ್ತು ಆನುಷಂಗಿಕವಾದ ಉಳಿ
ಅನೇಕ ಕಾರಣಗಳಿದ್ದರೂ ಕೂಡ ಕುರಡಿಯವರ ಚಾಲಕತ್ವವೇ ಇದಕ್ಕೆ ಮುಖ್ಯ
ಸಾಧನವಾಯಿತೆಂಬುದನ್ನು ಹೇಳದಿರಲಾರೆವು.

ಶಾಲೆಯ ಮುಖ್ಯಾಧ್ಯಾಪಕನ ಸ್ಥಾನದಲ್ಲಿರುವದು ಬೇರೆ; ನಿಜವಾದ
ಮುಖ್ಯಾಧ್ಯಾಪಕನಾಗಿರುವದು ಬೇರೆ. ನಿಜವಾದ ಮುಖ್ಯಾಧ್ಯಾಪಕನಲ್ಲಿ ಎರಡು
ಬಗೆಯ ಸಾಮರ್ಥ್ಯಗಳಿರಬೇಕಾಗುವದು. ಇಡಿಯ ಶಾಲೆಯನ್ನು ಒಂದೇ
ಕಟ್ಟಿನಲ್ಲಿಟ್ಟು ಎಲ್ಲ ಶಿಕ್ಷಕರನ್ನು ಒಂದೇ ಸೂತ್ರದಲ್ಲಿ ಪೋಣಿಸಿ ಎಲ್ಲರಿಗೂ
ತಕ್ಕಂತೆ ಕೆಲಸಹಂಚಿ ಪಾಲಕರಿಗೂ ಮೇಲಧಿಕಾರಿಗಳಿಗೂ ಅನುಕೂಲರಾಗಿರು
ವಂಥ ಪರಿಸ್ಥಿತಿಯನ್ನುಂಟುಮಾಡಿಕೊಳ್ಳುವದು ಮೊದಲನೆಯದು. ಜೆನ್ನಾಗಿ
ಕಲಿಸಿ, ಮೊದರಿಯಾಗಿ ಕಲಿಸಿ ತೋರಿಸಿ, ಕಲಿಸುವಿಕೆಯಲ್ಲಿ ಹೊಸ ಬಗೆಯನ್ನಾ
ಗಲಿ ಹೊಸ ಹೊಂದಿಕೆಯನ್ನಾಗಲಿ ಮುಂದಿಟ್ಟುಕೊಂಡು, ಶೈಕ್ಷಣಿಕ ಪ್ರಯೋಗ
ಗಳನ್ನೂ ಸಾಕಷ್ಟು ಗಮನಿಸಿ, ತನ್ನ ನಾಡಿನ ಪ್ರಜಲಿತಸಾಧನ ಹಾಗು ಗುರಿಗಳಿಗೆ
ಅನುಗುಣವಾಗಿ ಸಾಗಿ, ಶಿಕ್ಷಣಕ್ಷೇತ್ರಗಲ್ಲಿ ತನಗೊಂದು ವಿಶಿಷ್ಟಸ್ಥಾನವನ್ನು
ಕಲ್ಪಿಸಿಕೊಂಡು ಸ್ವಯಂಪ್ರಕಾಶವನ್ನು ಪಡೆಯುವದು ಎರಡನೆಯದು. ಈ
ಎರಡೂ ತರದ ಸಾಮರ್ಥ್ಯಗಳು ನಾರಾಯಣರಾಯರಲ್ಲಿದ್ದುದರಿಂದ ಅವರ
ಕೆಲಸದ ಬಗೆಗೆ ಯಾವ ಅಧಿಕಾರಿಗಳೇ ಆಗಲಿ, ಯಾವ ವಿಧದ ಆಕ್ಷೇಪವನ್ನೂ
ಎತ್ತಲಿಲ್ಲ. ಕಾಲೇಜದಲ್ಲಿ ಇದುವರೆಗೆ ಪ್ರಿನ್ಸಿಪಾಲರಾಗಿರುವವರೆಲ್ಲರೂ ಇವರ
ಕೆಲಸವನ್ನು ಕಂಡು ಮೆಚ್ಚಿ ಸಂತೋಷವನ್ನು ವ್ಯಕ್ತಮಾಡಿದ್ದಾರೆ. ಇಲ್ಲಿಯ
ಸ್ಥಾನಿಕ ವಿದ್ಯಾಧಿಕಾರಿಗಳು, ಡಾಯರೆಕ್ಟರ ದೊರೆಗಳು, ಮಾನ್ಯರಾದ ಶಿಕ್ಷಣ
ಮಂತ್ರಿಗಳು, ಹಿಂದುಸ್ತಾನ ಸರಕಾರದ ಶಿಕ್ಷಣಖಾತೆಯ ಅಧಿಕಾರಿಗಳು ಕೂಡ
ಇವರ ಕರ್ತೃತ್ವಶಕ್ತಿಯನ್ನೂ ಶಾಲಾವ್ಯವಸ್ಥೆಯನ್ನೂ ಕಣ್ಣಾರೆ ಕಂಡು ಇವರ
ಬಗ್ಗೆ ಸದಭಿಪ್ರಾಯಗಳನ್ನು ಸ್ಪಷ್ಟವಾಗಿ ಬರೆದಿರಿಸಿದ್ದಾರೆ. ಈ ಶಾಲೆಯನ್ನೂ
ಶಿಕ್ಷಕರನ್ನೂ ಮಾದರಿಯ ಶಾಲೆ (Model School) ಅತ್ಯುತ್ತಮ ಶಿಕ್ಷಕರು
(excellent teacher) ಎಂದು ಹಲವುಸಾರೆ ಕರೆದಿದ್ದಾರೆ.

ಶಿಕ್ಷಣದ ಕೇಂದ್ರಸ್ಥಾನದಲ್ಲಿರುವ ಪ್ರ್ಯಾಕ್ಟಿಸಿಂಗ್ ಸ್ಕೂಲಿಗೆ ಇರುವ
ಮಹತ್ವವನ್ನು ಬೇರೆ ಹೇಳಲುಬೇಡ. ಇದರ ಮುಖ್ಯಾಧ್ಯಾಪಕರು ಶಿಕ್ಷಣಕ್ಷೇತ್ರ

ದಲ್ಲಿಯ ಹೊಸ ಹೊಸ ಚಟುವಟಿಕೆಗಳನ್ನು ಯಾವಾಗಲೂ ಬಳಕೆಗೆ ತರಬೇಕಾಗುವದು; ಅಲ್ಲದೆ ಶಿಕ್ಷಣಾಲಯದ ಕಾರ್ಯಕಲಾಪಗಳಲ್ಲಿ ಪ್ರಿನ್ಸಿಪಾಲರಿಗೂ ಅಧ್ಯಾಪಕರಿಗೂ ಸಹಕಾರಿಯಾಗಿರಬೇಕಾಗುತ್ತದೆ. ಶಿಕ್ಷಣಾಲಯದ ಅಧ್ಯಾಪಕರೆಲ್ಲರೂ ಬಹುತರವಾಗಿ ಒಂದಿಲ್ಲೊಂದು ಶಿಕ್ಷಣಕಾರ್ಯಗಳ ಚಟುವಟಿಕೆಗಳನ್ನು ಪ್ರಯೋಗದಲ್ಲಿ ತರಲು ಇವರಿಗೆ ಹೇಳುವವರೇ! ಅವೆಲ್ಲವನ್ನು ಇವರು ಕೇಳಿಕೊಳ್ಳಬೇಕು. ಪ್ರಯೋಗವನ್ನು ಮಾಡಬೇಕು. ಫಲಿತವನ್ನು ಅವರಿಗೆ ತಿಳಿಸಬೇಕು. ಈ ಕೆಲಸದಲ್ಲಿ ನಾರಾಯಣರಾಯರು ತುಂಬ ಯಶಸ್ವಿಗಳೆಂದು ಎಲ್ಲರೂ ಕಂಡುಕೊಂಡಿದ್ದಾರೆ. ಈ ಮುಖ್ಯಾಧ್ಯಾಪಕರಿಗೆ ಬರಿಯ ಶಿಕ್ಷಣ ಕಾರ್ಯವಿಶೇಷವೊಂದೇ ಅಲ್ಲದೆ ಇವರು ಶಿಕ್ಷಣಾಲಯದ ವಿದ್ಯಾರ್ಥಿಗಳ ಭೋಜನಗೃಹ–ವಸತಿಗೃಹಗಳ ಮೇಲ್ವಿಚಾರಕರಾಗಿರುವದು ಕೂಡ ಪರಂಪರೆಯಾಗಿ ಬಂದಿರುವದರಿಂದ ಶಾಲೆ-ಕಾಲೇಜಗಳ ಕೆಲಸದ ವೇಳೆಯನ್ನು ಬಿಟ್ಟು ದಿವಸದ ಉಳಿದ ಎಲ್ಲ ತಾಸುಗಳನ್ನೂ ಎಲ್ಲ ಕ್ಷಣಗಳನ್ನೂ ಕಾಲೇಜದಲ್ಲಿಯೇ ತಮಗಾಗಿ ಕೊಟ್ಟಿರುವ ಗೃಹದಲ್ಲಿ ನಿಂತು ಆ ಮೇಲ್ವಿಚಾರಣೆಯ ಕೆಲಸದಲ್ಲಿ ಕಳೆಯಬೇಕಾಗುತ್ತದೆ. ಅತಿ ವಿಶಾಲವಾದ ಈ ಸಂಸ್ಥೆಯ ಪರಿವಾರದವರ ಕಾರ್ಯಗಳನ್ನೂ ಯೋಗಕ್ಷೇಮಗಳನ್ನೂ ನೋಡಿಕೊಳ್ಳಬೇಕು. ದಿನಾಲು ಶಿಪಾಯಿ, ಕಾಮಾಠಿಗಳು, ಅಡಿಗೆಯವರು, ನೀರಿನವರು ಮೊದಲಾದ ಕೆಳಗಿನ ನೌಕರರ ಹತ್ತಿಪ್ಪತ್ತು ತಕ್ರಾರುಗಳಿಗೆ ತೀರ್ವುಕೊಡಬೇಕು. ವಿದ್ಯಾರ್ಥಿ ಶಿಕ್ಷಕರನ್ನು ಸಮಾಧಾನಗೊಳಿಸಬೇಕು. ಇಷ್ಟೆಲ್ಲ ಬಗೆಯ ಹೊಣೆಗಾರಿಕೆಯನ್ನು ಕೂಡ ನಾರಾಯಣರಾಯರು ಎಷ್ಟೊಂದು ಕುಶಲತೆಯಿಂದ ನಿರ್ವಹಿಸಿದರೆಂಬುದು ಎಲ್ಲರೂ ಬಲ್ಲ ಮಾತು. ಇದಕ್ಕೆ ಕೆಲವೊಂದು ವಿಶಿಷ್ಟತರದ ಸಾಮರ್ಥ್ಯವಿರಬೇಕಾಗುತ್ತದೆ. ಅದು ಕಡಿಮೆ ಇದ್ದರೆ ಸಿಟ್ಟಿನ ಭರದಲ್ಲಿ ಹಲವರ ಹಾನಿಗೆ ಕಾರಣವಾಗುವ ಸಂಭವವುಂಟು. ೧೮–೧೯ ವರ್ಷಗಳ ಮೇಲ್ವಿಚಾರಣೆಯ ಅವಧಿಯಲ್ಲಿ ಯಾರ ಹೊಟ್ಟೆಯ ಮೇಲೆಯೂ ಹೊಡೆಯದೆ, ದುಡಿಯದೆ ಸಂಬಳ ತಿನ್ನಬೇಕೆನ್ನುವ ಅಲಸಿಗಳಿಗೆ ಆಸ್ಪದಕೊಡದೆ, ಗಾಡಿಯವನು ಬಾಯಸಪ್ಪಳದಿಂದಲೊ, ಚಬಕವನ್ನೆತ್ತಿಹಿಡಿದೊ, ಬೆನ್ನುಚಪ್ಪರಿಸಿಯೋ, ಕೆಲಸಮಾಡಿಕೊಳ್ಳುತ್ತಿರುವಂತೆ ಎಲ್ಲರನ್ನೂ ಸಮಾಧಾನದಿಂದ ನಡಿಸಿಕೊಂಡ ನಾರಾಯಣರಾಯರಿಗೆ ಮೊನ್ನೆ ಈ ಪರಿವಾರವೂ ಕೂಡ ಪ್ರೀತಿಯಿಂದ ಏರ್ಪಡಿಸಿದ ಬೀಳ್ಕೊಡುವ ಸತ್ಕಾರಕೂಟವು ಈ ಸಂಸ್ಥೆಯಲ್ಲಿಯೆ ಅಪೂರ್ವವಾದದ್ದಾಗಿತ್ತು.

ಟ್ರೇನಿಂಗ್ ಕಾಲೇಜವು ಟ್ರೇನಿಂಗ್ ಸ್ಕೂಲ್ ಆಗಲು ಸರಕಾರದ ಲೆಕ್ಕಾಚಾರದಂತೆ ೧೯೩೪ರಿಂದ ಕೆಲವು ವರ್ಷ ಇದರ ಆಫೀಸಿಗೆ ಕಾರಕೂನರಿಲ್ಲದೆ

ಲಸ ನಡೆಯಬೇಕಾಯಿತು. ಆ ಕೆಲಸವನ್ನು ಯಾರು ಮಾಡಬೇಕು? ನಾರಕೂನಿಕೆಯೆ ಕೆಲಸದ ಸುಖದುಃಖಗಳನ್ನು ಅವರ ಸಹ ವ್ಯವಸಾಯಿಗಳ ಹೊರತು, ಉಳಿದವರು ಸರಿಯಾಗಿ ತಿಳಿಯುವುದು ಕಠಿಣ. ಈ ಕಾರ್ಯವನ್ನು ಹೂಡ ನಾರಾಯಣರಾಯರು ತಮ್ಮ ಶಾಲೆ ಭೋಜನ-ವಸತಿಗೃಹಗಳ ಕೆಲಸ ಳೊಂದಿಗೆ ಹೇಗೋ ಹಾಗೆ ಮಾಡಿದರೆಂತಲ್ಲ. ಹಲವು ಸಾರೆ ಇವರು ಸಿದ್ಧ ಮಾಡಿದ ಕಾಗದಪತ್ರಗಳಲ್ಲಿ ತಿದ್ದುಪಡಿ ಮಾಡುವ ಸಂದರ್ಭವೇ ಮುಖ್ಯ ಕಾಲಕರಿಗೆ ಒದಗುತ್ತಿರಲಿಲ್ಲ. ಟ್ರೇನಿಂಗ್ ಸ್ಕೂಲಿನ ಕಾಗದಗಳೂ ಲೆಕ್ಕಪತ್ರ ಳೂ ತಡವಾಗಿ ಸಾಗಿಸುವೆಂಬ ಮಾತೇ ಬರಲಿಲ್ಲ.

ಈ ಮೊದಲು ಪ್ರಾಕ್ಟಿಸಿಂಗ್ ಸ್ಕೂಲಿನ ಹೆಡ್‌ಮಾಸ್ತರರಾಗಿದ್ದವರಿಗೂ ಇವರಿಗೂ ಒಂದು ಬಗೆಯಲ್ಲಿ ಹೆಚ್ಚುಕಡಿಮೆಯಿದೆ. ಇವರೆಲ್ಲ ಸಚ್ಛಿಕ್ಷಕರೆಂದು ಪೆಸರುವಾಸಿಯಾದವರು. ಆದರೆ ಇವರಲ್ಲಿ ಅನೇಕರಿಗೆ ಈ ಪ್ರಾಕ್ಟಿಸಿಂಗ್ ಸ್ಕೂಲಿನ ಹೆಡ್‌ಮಾಸ್ತರ ಸ್ಥಳವೆಂದರೆ ಅ. ಡೆ. ಎ. ಇ ಆಗುವ ಮೊದಲನೆಯ ಪಿಟ್ಟಲು ಎನಿಸಿತ್ತು. ಇಲ್ಲಿ ಕೆಲಸಮಾಡಿದವರು ಉತ್ತಮ ಅ. ಡೆ. ಆಗುವ ಂಬ ಸಂಗತಿಯನ್ನು ವಿದ್ಯಾಧಿಕಾರಿಗಳು ಮನಗಂಡಿದ್ದರು. ಈ ಪರಂಪರೆ ಯಂತೆ ಶ್ರೀ. ಕುರಡಿಯವರಿಗಾದರೂ ಅ. ಡೆ. ಎ. ಇ. ಸ್ಥಳವು ದೊರೆಯಬಹು ದಾಗಿತ್ತು. ಇವರು ೧೯೨೨ನೆಯ ಇಸವಿಯಲ್ಲಿ ಕೆಲವು ತಿಂಗಳು ಕಾರವಾರ ಜಿಲ್ಲೆಯಲ್ಲಿ ಅಸಿ. ಡೆ. ಇ. ಇ. ರಾಗಿ ಕೆಲಸಮಾಡಿ ಅದರ ಅನುಭವ ಪಡೆದ ಬಳಿಕ ಯುಂದೆ ಅತ್ತ ಹೆಚ್ಚು ಮನಸ್ಸು ಹಾಕಲಿಲ್ಲ. ಶಿಕ್ಷಣ, ಅಧ್ಯಾಪನಗಳಿಗಾಗಿ ತಮ್ಮ ಸೇವೆಯನ್ನು ಮೀಸಲವಾಗಿರಿಸಿದರು. ಮುಂದೆ ಇಂಥ ಸ್ಥಾನಮಾನ ನಗಳ ಪ್ರಾಪ್ತಿಯ ಸಂದರ್ಭವು ಬಂದಾಗ್ಯೂ ಕೂಡ ಅದನ್ನು ಅಂಟಿಕೊಳ್ಳ ಲಿಲ್ಲ. ಇವರ ಸಹಾಯ ಸಿಫಾರಸು ಪಡೆದ ಕೆಲವರು ದೈವಶಾಲಿಗಳಾದ ಇವರ ಅಸಿಸ್ಟಂಟರು ಆ ಸ್ಥಳಕ್ಕೆ ಹೋದರೂ ತಾವು ಮಾತ್ರ ಕಲಿಸುವದರಲ್ಲಿಯೇ ಆನಂದಬಡುತ್ತ ಉಳಿದರು. ಇಷ್ಟೊಂದು ಸ್ಥಿರತೆ, ಸಂಯಮನ, ಶಿಕ್ಷಣಕಾರ್ಯ ದಲ್ಲಿ ಆದರ ಬುದ್ಧಿ ಇವು ಇವರಲ್ಲಿದ್ದುವು.

ಶಾಲೆಯ ಉಪಶಿಕ್ಷಕರಾಗಿ, ಮುಖ್ಯಾಧ್ಯಾಪಕರಾಗಿ, ಕಾಲೇಜಿನ ಅಧ್ಯಾ ಪಕರಾಗಿ, ಮೇಲ್ವಿಚಾರಕರಾಗಿ, ಎಲ್ಲೆಲ್ಲಿಯೂ ಎಲ್ಲ ಬಗೆಯ ಸ್ಥಾನಮಾನಗಳ ಕಾರ್ಯಗಳಲ್ಲಿಯೂ ಇವರು ಆದರ್ಶವಾಗಿ ಕೆಲಸಮಾಡಿದ್ದಾರೆ. ತಮ್ಮಕೆಲಸಗಳ ನ್ನಷ್ಟೇ ಅಲ್ಲದೆ ಮೇಲಧಿಕಾರಿಗಳು ತಮಗೆ ಒಪ್ಪಿಸಿದ ಎಲ್ಲ ಬಗೆಯ ವಿಶಿಷ್ಟ ಕೆಲಸ ಗಳನ್ನು ಸಹ ಸದ್ದಿಲ್ಲದೆ ಮಾಡುವದು ನಾರಾಯಣರಾಯರ ಸ್ವಭಾವ. ಅಸಿಸ್ಟಂಟರ ಮೇಲೆ ಅಧಿಕಾರದ ದರ್ಪವನ್ನು ಎಂದೂ ತೋರಿಸುತ್ತಿರಲಿಲ್ಲ. ಅವರಗೂಡ

ಬಿರುನುಡಿಗಳಿಲ್ಲ, ಕಲಹವಂತೂ ಇಲ್ಲವೇ ಇಲ್ಲ. ಸ್ವತಃ ಕಾರ್ಯದಕ್ಷರಾಗಿದ್ದುದರಿಂದ ಎಲ್ಲ ಅಸಿಸ್ಟಂಟರೂ ವಿದ್ಯಾರ್ಥಿಗಳೂ ಇವರಿಗೆ ತಾವೇ ವಿಧೇಯರಾಗಿರುತ್ತಿದ್ದರು; ತಮತಮಗೆ ಒಪ್ಪಿಸಿದ ಕಾರ್ಯಗಳನ್ನು ಉತ್ಸಾಹದಿಂದ ಮನಮುಟ್ಟಿ ಮಾಡುತ್ತಿದ್ದರು. ನಿಶ್ಚಿತವಾದ ಅಭಿಪ್ರಾಯಗಳನ್ನು ಕೊಡಬಲ್ಲ ಬುದ್ಧಿಮತ್ತೆ ಮತ್ತು ಅನುಭವಪೂರ್ಣವಾದ ಮಾರ್ಗದರ್ಶಕತೆ ಇವುಗಳ ಬಲದಿಂದ ಇವರು ನಿಜವಾದ ಹಿರಿಯರಾಗಿದ್ದರು. ಹತ್ತೇ ವರ್ಷ ನೌಕರಿಯಾದ ಕೂಡಲೆ ಪ್ರಾಥಮಿಕ ಶಿಕ್ಷಕರಿಗೆ ಸಿಗತಕ್ಕ ಕೊನೆಯ ಪರಮಾವಧಿ ಸಂಬಳವು ಇವರಿಗೆ ಸಿಕ್ಕಿತು. ಇದರಿಂದ ಇವರಿಗಿಂತ ಹೆಚ್ಚು ನೌಕರಿಯಾದವರನೇಕರು ಈ ಶಾಲೆಯಲ್ಲಿ ಅಸಿಸ್ಟಂಟರಾಗಿ ಕೆಲಸಮಾಡಬೇಕಾಗುತ್ತಿತ್ತು. ಇಂಥ ಸ್ಥಿತಿಯಲ್ಲಿಯೂ ಮುಖ್ಯಾಧ್ಯಾಪಕರಾಗಿದ್ದ ೧೯ ವರ್ಷಗಳ ಅವಧಿಯಲ್ಲಿ ಮೇಲಧಿಕಾರಿಗಳ ಬಳಿಯಲ್ಲಿ ಯಾರೊಬ್ಬರ ವಿರುದ್ಧವಾಗಿ ಒಮ್ಮೆ ಸಹ ದೂರುಹೇಳುವ ಪ್ರಸಂಗವು ಇವರಿಗೆ ಬರಲೇ ಇಲ್ಲ. ತುಸು ಅಧಿಕಾರ ದೊರಕಿಸಿದ ಅನೇಕರು ತಮ್ಮ ಕೈಕೆಳಗಿನವರಿಗೆ ಹೇಗೆ ಅಪ್ರಿಯರಾಗುವರೆಂಬುದರ ಅನುಭವವು ಹಲವರಿಗಿರುವದಷ್ಟೆ? ಆದರೆ ಇವರು ತಮ್ಮ ಶಾಲೆಯಲ್ಲಿ ಲಾಗ ಬುಕ್ಕನ್ನೇ ಇಟ್ಟಿರಲಿಲ್ಲ, ಎಂಬುದನ್ನು ಕೇಳಿದರೆ ಆಶ್ಚರ್ಯವೆನಿಸಬಹುದಲ್ಲವೇ? ಇವರ ನಿರೀಕ್ಷಣೆಯೇ ಅಷ್ಟೊಂದು ವಿಶಾಲವಾದದ್ದು. ಇವರು ತಮ್ಮ ಸಹಾಯೋಪಾಧ್ಯಾಯರಿಗೆ ಸಂದರ್ಭಾನುಸಾರವಾಗಿ ಕೊಟ್ಟ ಸಲಹೆ ಸೂಚನೆಗಳು ಉಪಯುಕ್ತವಾದಂಥವೂ ಕಾರ್ಯಕಾರಿಯಾದುವೂ ಇರುತ್ತಿದ್ದವೆಂಬುದರಲ್ಲಿ ಸಂಶಯವಿಲ್ಲ. ಇವರ ಮೇಲ್ವಿಚಾರಣೆಯು ತುಂಬ ಗಂಭೀರವಾದದ್ದು. ಇವರ ಆಳಿಕೆಯಲ್ಲಿ ಪ್ರತಿಯೊಂದು ವರ್ಗದ ಶಿಕ್ಷರಿಗೆ ತಾವೇ ಹೆಡ್ ಮಾಸ್ತರರಿದ್ದಂತೆಯೇ ಭಾವನೆ. ಆದರೆ ಇದರ ಒಳಗುಟ್ಟನ್ನು ಅರಿಯದ ಹೊರಗಿನ ಪ್ರೇಕ್ಷಕರಿಗೆ ಶ್ರೀ. ಕುರಡಿ ಅವರೇ ಆಯಾ ವರ್ಗದ ಶಿಕ್ಷಕರೆನ್ನಿಸುವಂತಿತ್ತು. ಇವರ ಮೇಲ್ವಿಚಾರಣೆಯು ಅಷ್ಟು ಆಳವಾಗಿಯೂ, ಹಿತವಾಗಿಯೂ, ಮಿತವಾಗಿಯೂ, ಮಾರ್ಗದರ್ಶಕವಾಗಿಯೂ ಇರುತ್ತಿತ್ತು. ಸಂದರ್ಭಾನುಸಾರವಾದ ಸೂಚನೆಗಳಲ್ಲಿ ಸ್ನೇಹ ಸಹಾನುಭೂತಿಗಳು ಒಡಮೂಡಿರುತ್ತಿದ್ದುವು. ಇಂತಹ ಸರಳವಾದ ನಡತೆಯು ಆದರ್ಶವಲ್ಲವೆ!

ಇತ್ತೀಚೆಗೆ ಪ್ರಾಥಮಿಕ ಶಾಲೆಗಳ ಅಭ್ಯಾಸಪತ್ರಿಕೆಯಲ್ಲಿ ಆಗಾಗ ಹಲವು ಮಾರ್ಪಾಡುಗಳಾಗುತ್ತ ಬಂದಿವೆ. ಹೊಸ ಮಾರ್ಪಾಡುಗಳು ಬಳಕೆಯಲ್ಲಿ ಬರಬೇಕೆಂದು ಸರಕಾರದವರು ಗೊತ್ತುಮಾಡಿದ ದಿನವೇ ಪ್ರಾಥ. ಸ್ಕೂ. ಸಲ್ಲಿ ಅವು ಬಳಕೆಗೆ ಬಂದೇ ತೀರುತ್ತಿದ್ದವು. ಏಕಂದರೆ ಕುರಡಿ ಅವರಿಗೆ ಸರಕಾರ

ದವರು ಮಾಡಿದ ಮಾರ್ಪಾಟುಗಳ ಮರ್ಮವು ತಟ್ಟನೆ ತಿಳಿಯುತ್ತಿದ್ದುದರಿಂದ ಅವನ್ನು ಬಳಕೆಯಲ್ಲಿ ತರಲು ಅವರಿಗೆ ಎಷ್ಟೂ ತೊಂದರೆಯಾಗುತ್ತಿರಲಿಲ್ಲ. ಮೊದಲು ಎರಡು ಮೂರು ವರ್ಷ ಯಾವದೊಂದು ಅಭ್ಯಾಸಕ್ರಮವನ್ನು ಪ್ರಯೋಗಮಾಡಿ ನೋಡಿದ ಬಳಿಕ ತಕ್ಕ ಮಾರ್ಪಾಡಿನೊಂದಿಗೆ ಅದನ್ನು ಎಲ್ಲ ಸಾಲೆಗಳಲ್ಲಿ ಕ್ರಮಶಃ ಪ್ರಚಾರದಲ್ಲಿ ತರುವ ಪದ್ಧತಿಯು ಉಂಟು. ಇಂಥ ಸಂದರ್ಭಗಳಲ್ಲಿ ಪ್ರಾ. ಸ್ಕೂ. ನವರು ಹೆಚ್ಚು ದಕ್ಷತೆಯಿಂದ ಕೆಲಸ ಮಾಡ ಬೇಕಾಗುವದು. ಈಚೆಗೆ ಭಾಷಾವಿಷಯದ ಅಭ್ಯಾಸಕ್ರಮದಲ್ಲಿ ಬದಲಾವಣೆಯಾದ ಬಳಿಕ ಮೌನವಾಚನ, ಸಾರಾಂಶಲೇಖನ ಮೊದಲಾದ ಹೊಸ ರೀತಿಗಳನ್ನು ಬಳಕೆಯಲ್ಲಿ ತಂದು ಪಳಗಿಸಿ ತೋರಿಸಿದವರಲ್ಲಿ ಇವರು ಮೊದಲಿಗರು. ಇವರಲ್ಲಿಯ ವಿಶೇಷ ಸಾಮರ್ಥ್ಯಗಳನ್ನುಕಂಡು ಅಧಿಕಾರಿಗಳು ಇವರನ್ನು ಹದಿನಾರು ವರ್ಷಗಳಿಂದಲೂ ಪ್ರಾಥಮಿಕಶಾಲಾ ಪ್ರಮಾಣಪತ್ರ ಪರೀಕ್ಷೆಯ ಪರೀಕ್ಷಕರೆಂದು ನಿಯಮಿಸಿಕೊಳ್ಳುತ್ತ ಬಂದಿರುವರು. ಈತ್ತೀಚೆಗೆ ಪ್ರಶ್ನ ಪತ್ರಿಕೆಯನ್ನು ತಯಾರಿಸುವ ಸಮಿತಿಯವರಲ್ಲಿಯೂ ಶ್ರೀ. ಕುರಡಿಯವರು ಒಬ್ಬರಾಗಿದ್ದರು. ಇಂಥ ಮನ್ನಣೆಯು ಪ್ರಾಥಮಿಕ ಶಿಕ್ಷಕರಿಗೆ ಅಪೂರ್ವವಾದುದಲ್ಲವೆ?

ಇನ್ನು ಶ್ರೀ. ಕುರಡಿ ಅವರ ಯೋಗ್ಯತೆಗೆ, ಪ್ರಸಿದ್ಧಿಗೆ, ಅವರು ಕೈಕೊಂಡ ವೃತ್ತಿಗೆ ಕಳೆಯೇರಿಸಿದ ಅವರ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಇಲ್ಲಿ ಹೇಳ ಬೇಕೆಂದಿರುವೆವು. ಅದರಲ್ಲಿ ಅವರು ಸಿದ್ಧಹಸ್ತರು. ಅದು ಯಾವುದೆಂದರೆ ವಿದ್ಯಾರ್ಥಿಗಳಿಗೆ ಪಾಠಕಲಿಸುವ ಕೌಶಲ್ಯ. ಅವರ ಎಲ್ಲ ಪಾಠಗಳು ಯಾವಾಗಲೂ ಮಾದರಿಯವಾಗಿಯೇ ಇರುತ್ತಿದ್ದವೆಂಬ ಮಾತಿನಲ್ಲಿ ಅತಿಶಯೋಕ್ತಿಯಿಲ್ಲ. ಅವರ ಪಾಠಕ್ಕೆ ಆಡಂಬರದ ಸಿದ್ಧತೆಯು ಬೇಕಾಗುತ್ತಿರಲಿಲ್ಲ. ಕೈಯಲ್ಲಿ ಒಂದು ಖಡುವಿನ ಕಡ್ಡಿ; ಹೆಚ್ಚೆಂದರೆ ಚಿಕ್ಕದೊಂದು ಕಾಗದದಲ್ಲಿ ನಾಲ್ಕು ಮುಖ್ಯ ಮಾತುಗಳ ಟಿಪ್ಪಣಿ, ಇಷ್ಟಾದರೆ ಸಾಕು. ಬೇಕಾದಾಗ ಬೇಕಾದ ವರ್ಗಕ್ಕೆ ಕೇಳಿದ ವಿಷಯವನ್ನು ಕಲಿಸಲು ಸದಾ ಸಿದ್ಧರು. ಅದು ಪ್ರಾಕ್ಟೀಸಿಂಗ್ ಸ್ಕೂಲಿನ ಬಾಲಕರ ವರ್ಗ ಮೊದಲುಗೊಂಡು ಬೇಕಾದ ವರ್ಗವಿರಲಿ; ತನುಗೆ ಪರಿಚಯವಿರದ ಹೊರಗಿನ ವಿದ್ಯಾರ್ಥಿಗಳ ವರ್ಗವಿರಲಿ; ರಾತ್ರಿಯ ಶಾಲೆಯ ಪ್ರಬುದ್ಧರ ವರ್ಗವಿರಲಿ; ಪ್ರೌಢಶಿಕ್ಷಣ ತರಬೇತಿಯ ವರ್ಗವಿರಲಿ; ಕಾಲೇಜದಂಥ ಅನುಭವಿಕ ಶಿಕ್ಷಕ ವಿದ್ಯಾರ್ಥಿಗಳ ವರ್ಗವಿರಲಿ; ಎಲ್ಲೆಲ್ಲಿಯೂ ಇವರು ಮಾದರಿಯಾಗಿಯೇ ಪಾಠ ಕಲಿಸುವರು. ಸಾಕಷ್ಟು ಅವಕಾಶದಿಂದ ಪೂರ್ವಸಿದ್ಧತೆ ಮಾಡಿಕೊಂಡು ಪಾಠವನ್ನು ಕಲಿಸುವವರು ಪಲವರಿರಬಹುದು. ಆದರೆ ಸದಾ ಸಿದ್ಧರಾಗಿದ್ದುಕೊಂಡು ವಿದ್ಯಾರ್ಥಿಗಳಿಗೆ ಚಿತ್ತಾಕರ್ಷಕವಾಗಿ ಕಲಿಸಬಲ್ಲ ಶ್ರೀ.

ಕುರಡಿಯವರಂಥವರು ತೀರ ಕಡಿಮೆ. ಉಪಕರಣ, ಚಿತ್ರ ಮೊದಲಾದ ಸಾಧ
ಗಳು ಸಿದ್ಧವಿಲ್ಲೆಂಬ ನೆವವು ಇವರ ಬಳಿಯಲ್ಲಿ ಸಹ ಸುಳಿಯುತ್ತಿರಲಿಲ್ಲ. ಯಾ
ದಾದರೊಂದು ವಿಷಯದಲ್ಲಿ ಅಂದರೆ ಇತಿಹಾಸ ಗಣಿತ ಮುಂತಾದ ವಿಷಯ
ಗಳಲ್ಲಿ ಮಾತ್ರ ಮಾದರಿಯ ಪಾಠಗಳನ್ನು ಕೊಡಬಲ್ಲ ಶಿಕ್ಷಕರು ಅನೇಕರು
ಒಬ್ಬರು ಗಣಿತ ಪಾಠವನ್ನು ಚೆನ್ನಾಗಿ ಕಲಿಸಿದರೆ ಇನ್ನೊಬ್ಬರು ಭಾಷಾಪಾಠವನ್ನು
ಚೆನ್ನಾಗಿ ಕಲಿಸುವರು. ಅವರವರ ಐಚ್ಛಿಕ ವಿಷಯವೆಂಬುದೊಂದು ಹಲವರಿ
ಇರುವದುಂಟು. ಕುರಡಿ ಅವರಿಗೆ ಎಲ್ಲ ವಿಷಯಗಳೂ ಐಚ್ಛಿಕಗಳೇ. ಗಣಿತ
ಭಾಷೆ, ಇತಿಹಾಸ, ಭೂಗೋಲ, ಶಾಸ್ತ್ರೀಯವಿಷಯ, ಕೊನೆಗೆ ಕೈಕೆಲಸ ಮೊ
ಲಾಗಿ ಸಾಲೆಯಲ್ಲಿ ಕಲಿಸುವ ಎಲ್ಲ ವಿಷಯಗಳಲ್ಲಿಯೂ ಇವರು ಮಾದರಿಯ
ಪಾಠಗಳನ್ನು ಕೊಡಬಲ್ಲರು. ಇಷ್ಟೇ ಅಲ್ಲ, ಹಾಗೆ ನಿರಂತರ ಕೆಲಸಮಾಡುತ್ತ
ಬಂದಿರುವರು ಎಂಬುದನ್ನು ಅವರ ಸಹ ವ್ಯವಸಾಯಿಗಳೂ ಟ್ರೇ. ಕಾಲೇಜಿ
ಶಿಕ್ಷಕ ವಿದ್ಯಾರ್ಥಿಗಳೂ ಮನಗಂಡಿರುವರು. ಅವರು ಶಿಕ್ಷಣ ಕಲೆಯಲ್ಲಿ ಹೀ
ಅಪ್ರತಿಮರು. ಟ್ರೇನಿಂಗ್ ಸ್ಕೂಲು ಕಾಲೇಜಗಳಂಥ ಪ್ರಬುದ್ಧ ವಿದ್ಯಾರ್ಥಿಗ
ವರ್ಗಗಳನ್ನು ಅಡೆತಡೆಯಿಲ್ಲದೆ ಸಮರ್ಪಕವಾಗಿ ನಡೆಯಿಸಿಕೊಂಡು ಹೋಗ
ವಂತೆಯೇ ತೀರ ಚಿಕ್ಕ ಬಾಲಕರ ಗುಂಪಾದ ಬಾಲಕರ ವರ್ಗವನ್ನು ಕೂ
ಇವರು ತುಂಬ ಸಮರ್ಪಕವಾಗಿ ಕಲಿಸಬಲ್ಲವರಾಗಿದ್ದರು. ಪ್ರಾಕ್ಟಿಸಿಂಗ
ಸ್ಕೂಲಿನ ಹೆಡ್‌ಮಾಸ್ತರರಾದ ಬಳಿಕ ಅನೇಕ ವರ್ಷಗಳ ವರೆಗೆ ಇವರು ಬಾಲಕ
ವರ್ಗವನ್ನು ತಾವೇ ಕಲಿಸುತ್ತಿದ್ದರು. ಅವರ ಬಗ್ಗೆ ನಮ್ಮ ಭಾಗದ ಎಜ್ಯು
ಕೇಶನಲ್ ಇನ್‌ಸ್ಪೆಕ್ಟರೊಬ್ಬರು (Excellent kinder garten teacher
'ಅತ್ಯುತ್ತಮ ಬಾಲೋದ್ಯಾನ ಶಿಕ್ಷಕ (Teaching ability excellent)
ಕಲಿಸುವ ಸಾಮರ್ಥ್ಯವು ಅತ್ಯುತ್ತಮ ತರಗತಿಯದು' ಎಂದು ಬರೆದಿಟ್ಟಿದ್ದಾರೆ
ಪ್ರಾಥಮಿಕ ಶಾಲೆಗಳಲ್ಲಿ ಚಿಕ್ಕ ಮಕ್ಕಳು ಬಾಲಕರ ವರ್ಗದಲ್ಲಿಯೇ ಹೆಚ್ಚು
ಕಾಲವನ್ನು ವ್ಯರ್ಥಕಳೆಯುತ್ತಿರುವದರಿಂದ ಸರಕಾರದ ಹಣದ ಅಪವ್ಯಯ
ವಾಗುತ್ತಿದೆ ಎಂಬ ಅಪವಾದವೊಂದು ನಮ್ಮ ತಲೆಯಮೇಲೆ ಕುಳಿತಿರುವದು.
ಬಾಲಕರ ವರ್ಗ ಮತ್ತು ಮೊದಲನೆಯ ಇಯತ್ತೆ ಈ ಎರಡು ವರ್ಷಗಳ ಅಭ್ಯಾಸ
ಕ್ರಮವನ್ನು ಒಂದೇ ವರ್ಷದಲ್ಲಿ ಮುಗಿಸುವದು ಸಹಜ ಸಾಧ್ಯವೆಂಬ ಪ್ರಯೋಗ
ವನ್ನು ಶ್ರೀ. ಕುರಡಿಯವರು ಪ್ರಾಥ. ಸ್ಕೂಲಿನಲ್ಲಿ ಮೂರು ವರ್ಷಗಳ ವರೆಗೆ
ಬಿಟ್ಟುಬಿಡದೆ ಪ್ರತ್ಯಕ್ಷಮಾಡಿ ತೋರಿಸಿರುವರು. ಇನ್ನು ಇವರ ಸಾಹಿತ್ಯಸೇವೆ;
ಈ ವಿಚಾರವನ್ನು ಮುಂದಿನ ಸಾರೆ ಪ್ರಸ್ತಾಪಿಸುವೆವು.

H. G. Katti

ಗ್ರಾಮವಿಚಾರಣೆ

ಶ್ರೀ. ಎಸ್. ಜಿ. ಭೈಚವಾಳ, ಎಮ್. ಏ ಅವರಿಂದ

ಇತ್ತೀಚೆಗೆ ಗ್ರಾಮೋದ್ಧಾರದ ಸೊಲ್ಲು ಎಲ್ಲ ಕಡೆಗೂ ಕೇಳಿ ಬರುತ್ತಿರುವುದು. ಆ ವಿಷಯದಲ್ಲಿ ಮಾತನಾಡುವವರೇ ಬಹಳ. ನಿಜವಾಗಿಯೂ ಅವರಲ್ಲಿ ಬಹುಜನರು ಹಳ್ಳಿಗಳಿಗೆ ಹೋಗಿಲ್ಲ ; ಅಲ್ಲಿಯ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ನೋಡಿಲ್ಲ ; ಕುಂದುಕೊರತೆಗಳನ್ನು ಹೋಗಲಾಡಿಸುವ ಕಾರ್ಯವನ್ನು ಕೈಕೊಂಡಿಲ್ಲ. ಈ ಕಾರ್ಯವನ್ನು ಪ್ರಾಥಮಿಕ ಶಿಕ್ಷಕರು ಕೈಕೊಳ್ಳಬಹುದಾಗಿದೆ. ಅವರು ಈ ಕೆಲಸವನ್ನು ವಿದ್ಯಾರ್ಥಿಗಳ ಸಹಾಯ-ಸಹಕಾರಗಳಿಂದ ಮನಃಪೂರ್ವಕವಾಗಿ ಕೈಕೊಂಡರೆ ಅವರು ದೇಶದ ಒಂದು ವಿಧಾಯಕ ಕಾರ್ಯವನ್ನು ಕೈಕೊಂಡಂತಾಗಿ ದೇಶೋದ್ಧಾರದ ಕಾರ್ಯಕ್ಕೆ ತಳಹದಿಯನ್ನು ಹಾಕಿಕೊಟ್ಟಂತಾಗುವುದು.

ಹೆಚ್ಚಾಗಿ ಹಳ್ಳಿಗಳಲ್ಲಿಯೇ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಿಕ್ಷಕರು ಆಯಾ ಹಳ್ಳಿಗಳ ವಿಚಾರಣೆಯನ್ನು ಸಂಶೋಧನಕ್ಕಾಗಿ ಕೈಕೊಂಡ ಪರ್ಯಟನೆಯಂತೆ ಕೈಕೊಳ್ಳಬೇಕು. ವಿದ್ಯಾರ್ಥಿಗಳ ಸಹಾಯದಿಂದ ಆಯಾ ಹಳ್ಳಿಯ ಬಗ್ಗೆ ಅವಶ್ಯವಿದ್ದ ಎಲ್ಲ ಉಪಯುಕ್ತವೂ ಮನೋರಂಜಕವೂ ಆದ ಸಂಗತಿಗಳನ್ನು ಕಲೆಹಾಕಿ ಪ್ರಗತಿಯ ದಾರಿಯನ್ನು ಕಂಡು ಹಿಡಿಯಬಹುದು. ಮುಂದೆ ಕೊಡುವ ಪ್ರಶ್ನಾವಾಲಿಕೆಯ ಸಹಾಯದಿಂದ ಶಿಕ್ಷಕರು ಕೆಳಗೆ ಕಾಣಿಸಿದ ವಿಷಯಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಕಲೆಹಾಕಬೇಕು.

೧. ಹಳ್ಳಿಯ ನಿವಾಸಿಗಳು	೭. ನೀತಿ ಮತ್ತು ಧರ್ಮ
೨. ಪ್ರಾಕೃತಿಕ ಸ್ವರೂಪ	೮. ಇತಿಹಾಸ
೩. ಸಾಮಾಜಿಕ ಜೀವನ	೯. ಭೂಗೋಲ
೪. ಆರ್ಥಿಕ ಸಮಸ್ಯೆ	೧೦. ಪ್ರಾಣಿಗಳು
೫. ಶಿಕ್ಷಣ	೧೧. ಹಳ್ಳಿಯ ಆಡಳಿತ
೬. ಆರೋಗ್ಯ	

ಪ್ರತಿಯೊಬ್ಬ ವಿದ್ಯಾರ್ಥಿಯ ಬಳಿಯಲ್ಲಿ ಒಂದು ಟಿಪ್ಪಣಿಯ ಪುಸ್ತಕ ವಿರಬೇಕು. ಅದರಲ್ಲಿ ಮೇಲೆ ಕಾಣಿಸಿದ ವಿಷಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಬರೆದುಕೊಳ್ಳಬೇಕು. ವಿದ್ಯಾರ್ಥಿಗಳು ತಮ್ಮಲ್ಲಿ ಇಬ್ಬಿಬ್ಬರ ಗುಂಪು

ಗಳನ್ನು ಮಾಡಿಕೊಂಡು ಒಂದೊಂದು ವಿಷಯವನ್ನು ಒಂದೊಂದು ಗುಂಪಿನವರು ಹಂಚಿಕೊಂಡು ಸಂಗತಿಗಳನ್ನು ಕಲೆಹಾಕಲು ಪ್ರಾರಂಭಿಸಬೇಕು. ಮೇಲ್ಕಾಣಿಸಿದ ವಿಷಯಗಳಲ್ಲದೆ ಮಹತ್ವದ ಬೇರೆ ಯಾವುದಾದರೂ ಸಂಗತಿಯು ಹಳ್ಳಿಯಲ್ಲಿ ಕಂಡುಬಂದರೆ ಆ ವಿಷಯವನ್ನೂ ತಮ್ಮ ಪುಸ್ತಕದಲ್ಲಿ ಪ್ರತ್ಯೇಕವಾಗಿ ಬರೆದು ಆ ವಿಷಯದ ಬಗ್ಗೆ ಎಲ್ಲ ಸಂಗತಿಗಳನ್ನು ಸಂಗ್ರಹಿಸಬೇಕು. ವಿದ್ಯಾರ್ಥಿಗಳು ತಮ್ಮ ಪ್ರಶ್ನಮಾಲಿಕೆಯ ಪುಸ್ತಕದ ಪುಟದ ಹಿಮ್ಮಗ್ಗಲಿಗೆ ಆಯಾ ವಿಷಯಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ಅಂಟಿಸಿರಬೇಕು; ನಕಾಶೆಗಳನ್ನು ತೆಗೆಯಬೇಕು; ಆಕೃತಿಗಳನ್ನು ರೂಪಿಸಬೇಕು. ಈ ಪ್ರಶ್ನಿಮಾಲಿಕೆಯ ಪುಸ್ತಕದ ಹೊರತಾಗಿ ವಿದ್ಯಾರ್ಥಿಗಳ ಪತ್ತರ ಹಳ್ಳಿಗರ ಕೆಟ್ಟ ಚಟಗಳು, ರೂಢಿಗಳು, ನ್ಯಾಯಾನ್ಯಾಯಗಳು, ತೊಂದರೆಗಳು, ಬೇನೆ ಬೇಸರಿಕೆಗಳು, ಅಂಧವಿಶ್ವಾಸ ಶ್ರದ್ಧೆಗಳು ಮುಂತಾದ ವಿಷಯಗಳ ವಿವರಣೆಯನ್ನು ಬರೆಯುವ ಬೇರೊಂದು ಪುಸ್ತಕವಿರಬೇಕು. ಇದರಿಂದ ಹಳ್ಳಿಗಳ ಸುಧಾರಣೆಯ ಬಗ್ಗೆ ಅವರು ಅನೇಕ ಮಹತ್ವಪೂರ್ಣವಾದ ಸಂಗತಿಗಳನ್ನು ಕಲಿಹಾಕಿದಂತಾಗುವುದು.

ಇಂಥ ಹಳ್ಳಿಯ ವಿಚಾರಣೆಗಳಿಂದ ಮುಂದೆ ಹೇಳುವ ಶೈಕ್ಷಣಿಕ ಲಾಭಗಳಾಗುವವು.

೧. ಸಂಶೋಧನ ಮತ್ತು ಶೋಧನಪ್ರವೃತ್ತಿಗಳನ್ನು ಉತ್ತೇಜನಗೊಳಿಸುವುದು.

೨. ನಿರೀಕ್ಷಣೆ ಮತ್ತು ಸರಿಯಾದ ಪ್ರಮಾಣಗಳನ್ನು ಸಿದ್ಧಗೊಳಿಸುವುದು.

೩. ಪ್ರಾಕೃತಿಕ ಹಾಗೂ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಅಭಿರುಚಿಯನ್ನು ಹುಟ್ಟಿಸುವುದು.

೪. ಶಾಸ್ತ್ರೀಯ ವಿಷಯಗಳ ಮತ್ತು ಕ್ರಮಗಳ ಬಗ್ಗೆ ಆಸ್ಥೆಯನ್ನು ವಿಕಾಸಗೊಳಿಸುವುದು.

೫. ಹಳ್ಳಿಗರ ಜೀವನಕ್ರಮ ಮತ್ತು ಕೆಲಸಗಳ ಬಗ್ಗೆ ತಿಳಿವಳಿಕೆಯನ್ನುಂಟುಮಾಡುವುದು.

೬. ಸ್ಥಾನಿಕ ಇತಿಹಾಸದ ಪರಿಚಯವನ್ನು ಮಾಡಿಕೊಡುವುದು.

೭. ಸ್ಥಾನಿಕ ಭೂಗೋಲದ ನಕಾಶೆಯನ್ನೂ ಆಕೃತಿಗಳನ್ನೂ ತೆಗೆಯುವ ರೂಢಿಯನ್ನು ಮಾಡಿಕೊಡುವುದು.

೮. ಚಿತ್ರಕಲೆಯಲ್ಲಿ ಆಸ್ಥೆಯನ್ನು ಹುಟ್ಟಿಸುವುದು.

೯. ಸೃಷ್ಟವಸ್ತು ಪರಿಚಯವನ್ನು ಮಾಡಿಕೊಡುವುದು

ಪ್ರಕಟಣೆ ೧

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ೧೯೪೬

ಈ ವರ್ಷದ **ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯು** ತಾ. ೬–೩–೧೯೪೩ ನೆಯ ಸೋಮವಾರ ಮತ್ತು ಮುಂದಿನ ದಿನಗಳಲ್ಲಿ ಮುಂದೆ ಹೇಳುವ ಕೇಂದ್ರಗಳಲ್ಲಿ ನಡೆಯುವದೆಂದು ಗೊತ್ತಾಗಿದೆ.

ಧಾರವಾಡ	ವಿಜಾಪುರ
ಹುಬ್ಬಳ್ಳಿ	ಕಾರವಾರ
ಗದಗ	ಕೊಲ್ಹಾಪುರ
ಬೆಳಗಾವಿ	

೨. ಸದರೀ ಪರೀಕ್ಷೆಯು ಮುಂಬಯಿ ಸರಕಾರೀ ಗ್ಯಾಝೆಟಿನ ೧–೮–೧೯೨೯ ನೆಯ ತಾ. ನ ಸಂಚಿಕೆಯ ಮೊದಲನೆಯ ಭಾಗದೊಳಗಿನ ೧೬೫೯ ರಿಂದ ೧೬೬೩ ರವರೆಗಿನ ಪುಟಗಳಲ್ಲಿ ಪ್ರಕಟಿಸಲ್ಪಟ್ಟ ೨೬–೭–೧೯೨೯ ನೆಯ ದಿನದ ೨೬೩೬ ನೆಯ ನಂಬರಿನ ವಿದ್ಯಾಖಾತೆಯ ಸರಕಾರೀ ಪ್ರಕಟನೆಯಲ್ಲಿ ಹೇಳಿರುವ **ನಿಯಮ**ಗಳಿಗೂ, ೬–೮–೧೯೩೧ ನೆಯ ತಾರೀಖಿನ ಮುಂಬಯಿ ಸರಕಾರಿ ಗ್ಯಾಝೆಟಿನ ಸಂಚಿಕೆಯ ಮೊದಲನೆಯ ಭಾಗದ ೧೭೮೪ ನೆಯ ಪುಟದಲ್ಲಿ ಪ್ರಕಟವಾದ ೩–೮–೧೯೩೧ ನೆಯ ತಾರೀಖಿನ ೨೬೩೬ ನೆಯ ನಂಬರಿನ ವಿದ್ಯಾಖಾತೆಯ ಸರಕಾರೀ ನಿರ್ಣಯದಲ್ಲಿಯೂ ಮುಂಬಯಿ ಸರಕಾರೀ ಗ್ಯಾಝೆಟಿನ ೨೨–೮–೧೯೩೫ ನೆಯ ತಾರೀಖಿನ ಸಂಚಿಕೆಯ ಭಾಗದ ೧೫೫೩ ನೆಯ ಪುಟದಲ್ಲಿ ಪ್ರಕಟವಾದ ೧೯–೮–೧೯೩೫ ನೆಯ ತಾರೀಖಿನ ೨೬೩೬ ನೆಯ ನಂಬರಿನ ವಿದ್ಯಾಖಾತೆಯ ಸರಕಾರಿ ನಿರ್ಣಯದಲ್ಲಿಯೂ, ೨೩–೬–೧೯೩೮ ನೆಯ ತಾರೀಖಿನ ೨೨೮೮ ನೆಯ ನಂಬರಿನ ವಿದ್ಯಾಖಾತೆಯ ಸರಕಾರೀ ನಿರ್ಣಯದಲ್ಲಿಯೂ ಮತ್ತು ೨೧–೧೧–೧೯೩೯ ನೆಯ ತಾರೀಖಿನ ೨೮೮೮ ನೆಯ ನಂಬರಿನ ವಿದ್ಯಾಖಾತೆಯ ಸರಕಾರೀ ನಿರ್ಣಯದಲ್ಲಿಯೂ ತಾ. ೧೦–೬–೧೯೪೧ ನೆಯ ತಾರೀಖಿನ ೬೫೪೭ ಎಫ್ ನಂಬರಿನ ವಿದ್ಯಾಖಾತೆಯ ಸರಕಾರೀ ಹುಕುಮಿನಲ್ಲಿಯೂ ಹೇಳಿರುವ **ತಿದ್ದುಪಡಿ**ಗಳಿಗೂ, ಅನುಸಾರವಾಗಿ ತೆಗೆದುಕೊಳ್ಳಲ್ಪಡುವದು.

೩. ಈ ಕೆಳಗೆ ವಿವರಿಸಿದಂತೆ ಆಯಾ ಕೇಂದ್ರಗಳ ಬಗ್ಗೆ ಒಂದೊಂದು ಪರೀಕ್ಷಾ ಸಮಿತಿಗಳಿದ್ದು ಅವರು ಪರೀಕ್ಷೆಯನ್ನು ನಡೆಯಿಸುವರು. ಆಯಾ ಸಮಿತಿಗಳ ಜೇಅರಮನ್ನರು ಈ ಕೆಳಗೆ ಹೇಳುವ ಜನರಿರಬೇಕೆಂದು ಗೊತ್ತಾಗಿರುವದು.

ಧಾರವಾಡ.....ಹೆಣ್ಣು ಮಕ್ಕಳ ಟ್ರೇನಿಂಗ್ ಕಾಲೇಜದ ಲೇಡಿ ಸುಪರಿಂಟಿಂಡೆಂಟರು ; **ಧಾರವಾಡ.**

ಹುಬ್ಬಳ್ಳಿ.....ಆಂಗ್ಲೋ ಉರ್ದು ಹಾಯಸ್ಕೂಲಿನ ಹೆಡ್‌ಮಾಸ್ತರರು ; **ಹುಬ್ಬಳ್ಳಿ.**

ಗದಗ.....ಧಾರವಾಡ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ; **ಧಾರವಾಡ.**

ಬೆಳಗಾವಿ.....ಸರದಾರ್ಸ ಹಾಯಸ್ಕೂಲಿನ ಹೆಡ್‌ಮಾಸ್ತರರು; **ಬೆಳಗಾವಿ**

ವಿಜಾಪುರ.....ಆಂಗ್ಲೋ ಕನ್ನಡ ಗರ್ಲ್ಸ್ ಹೈಸ್ಕೂಲಿನ ಹೆಡ್‌ಮಿಸ್ಟ್ರೆಸರು ; **ವಿಜಾಪುರ.**

ಕಾರವಾರ.....ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು ; **ಕಾರವಾರ.**

ಕೊಲ್ಲಾಪುರ.....ಕೊಲ್ಲಾಪುರ ಸರಕಾರದ ಪ್ರೈಮರಿ ಸ್ಕೂಲುಗಳ ಇನ್‌ಸ್ಪೆಕ್ಟರರು ; **ಕೊಲ್ಲಾಪುರ.**

೪. ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದುವಾರರು ತಮ್ಮ ಅರ್ಜಿಗಳನ್ನು ತಾವು ಕೂಡ್ರಲಿಚ್ಛಿಸುವ ಕೇಂದ್ರದ ಸಮಿತಿಯ ಜೇಅರಮನ್ನರಿಗೆ ಸರಕಾರದವರು ಗೊತ್ತುಪಡಿಸಿ ಮುದ್ರಿಸಿದ ಫಾರ್ಮಿನಲ್ಲಿ ತುಂಬಿ ಕಳುಹಿಸಬೇಕು. ಈ ಫಾರ್ಮುಗಳಿಗೆ ಬೆಲೆ ಬೀಳುವದಿಲ್ಲ. ಆಯಾ ಸಮಿತಿಗಳ ಜೇಅರಮನ್ನರಿಗೆ ಅರ್ಜಿ ಮಾಡಿಕೊಂಡರೆ ಕಳುಹಿಸಿ ಕೊಡುವರು.

೫. ಉರ್ದು ಉಮೇದುವಾರರ ಪರೀಕ್ಷೆಯು ಸಹ ಮೇಲೆ ಹೇಳಿದ ಕೇಂದ್ರಗಳಲ್ಲಿಯೇ ಅವೇ ದಿನಗಳಲ್ಲಿಯೇ ನಡೆಯುವದು.

೬. ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆಯನ್ನು ಬೇಡುವ **ಅರ್ಜಿಯೂ** ಪರೀಕ್ಷೆಯ **ಫೀ ಮೂರು ರೂಪಾಯಿಗಳೂ** ಆಯಾ ಜೇಅರಮನ್ನರಿಗೆ ೧೯-೨-೧೯೪೩ನೆಯ ದಿವಸ ಅಥವಾ ಅದಕ್ಕೂ ಮೊದಲೇ ಮುಟ್ಟಿರಬೇಕು. ಅದಕ್ಕೂ ತಡವಾಗಿ ಬಂದ ಅರ್ಜಿಗಳು ಸ್ವೀಕರಿಸಲ್ಪಡಲಾರವು.

ಗುಜ್ಜುಗಾಡು ಜನರ ತಂಡಗಳನ್ನೊಳಗೊಂಡ ಹಿಂದುಳಿದ ವರ್ಗಗಳ ಉಮೇದುವಾರರಿಗೆ ಪರೀಕ್ಷೆಯ ಫೀಯು **ಒಂದು ರೂಪಾಯಿ** ಮಾತ್ರ ಇರುವದು.

೭. ಉಮೇದುವಾರರ ಅರ್ಹತೆ, ಪರೀಕ್ಷೆಯ ಅಭ್ಯಾಸಕ್ರಮ ಇವೇ ಮೊದಲಾದ ಹೆಚ್ಚಿನ ವಿವರಣೆಗಳು ಮೇಲೆಹೇಳಿದ ಮುಂಬಯಿ ಸರಕಾರಿ ಗ್ಯಾಝೆಟಿನ ಪುಟಗಳಲ್ಲಿ ಪ್ರಕಟವಾದ ನಿಯಮಗಳ ಎರಡನೆಯ ಪ್ಯಾರಾದಲ್ಲಿ ದೊರೆಯುವವು.

ದಕ್ಷಿಣಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಕಚೇರಿ
ತಾ. ೫೦-೧೨-೧೯೪೨

(ಸಹಿ) **V. V. Kamat**
ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ದ. ಭಾ.

ಪ್ರಕಟನೆ ೨-೩

ಶ್ರೀ. ಆರ್. ಆರ್. ಕಮಲಾಪುರ, ಗದಗ ಇವರು ಪ್ರಕಟಿಸಿದ '**ಸಚಿತ್ರ ನಿಬಂಧಮಾಲೆ**'ಯ ೧೯೪೧ ರಲ್ಲಿ ಮುದ್ರಿತವಾದ ನಾಲ್ಕನೆಯ ಆವೃತ್ತಿಯ ಪ್ರತಿಗಳನ್ನು ಪ್ರತಿಯೊಂದಕ್ಕೆ ಹದಿನಾಲ್ಕು ಆಣೆಗಳ ಬದಲು ಒಂದು ರೂ. ಬೆಲೆಗೆ ಮಾರಲು ಕನ್ನಡ ಸ್ಕೂಲ್ ಬುಕ್ ಕಮಿಟಿಯವರು ಒಪ್ಪಿಗೆಯನ್ನು ಕೊಟ್ಟಿರುವರು.

ಧಾರವಾಡ
ತಾ. ೧೫-೧-೧೯೪೩

(ಸಹಿ) S. B. Potdar
ಅ. ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ದ. ಭಾ.
ಕನ್ನಡ ಸ್ಕೂಲ್ ಬುಕ್ ಕಮಿಟಿಯ ಸೆಕ್ರೆಟರಿಯವರು

ಶ್ರೀ. ವಾಯ್. ವ್ಹಿ. ಜಹಾಗೀರದಾರ, ಚಂದ್ರವೈಭವ ನೈತಿಕ ಕನ್ನಡ ಗ್ರಂಥಮಾಲೆಯ ಸಂಪಾದಕರು, ಗದಗ, ಇವರು ಪ್ರಕಟಿಸಿದ '**ಚಿತ್ರಮಯ ಬಾಲಬೋಧೆ**'ಯ ೧೯೪೨ ರಲ್ಲಿ ಮುದ್ರಿತವಾದ ಮೂರನೆಯ ಆವೃತ್ತಿಯ ಪ್ರತಿಗಳನ್ನು ಪ್ರತಿಯೊಂದಕ್ಕೆ ೨ ಆಣೆಗಳ ಬದಲು ೨½ ಆಣೆಗಳ ಬೆಲೆಗೆ ಮಾರಲು ಕನ್ನಡ ಸ್ಕೂಲ್ ಬುಕ್ ಕಮಿಟಿಯವರು ಒಪ್ಪಿಗೆಯನ್ನು ಕೊಟ್ಟಿರುವರು.

ಧಾರವಾಡ
ತಾ. ೧೫-೧-೧೯೪೩

(ಸಹಿ) S. B. Potdar
ಅ. ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ದ. ಭಾ. ಮತ್ತು
ಕನ್ನಡ ಸ್ಕೂಲ್ ಬುಕ್ ಕಮಿಟಿಯ ಸೆಕ್ರೆಟರಿಯವರು

ಪತ್ರಗಳ ಮುಖ್ಯಾಂಶಗಳು

ಮಂಕಿ:— (ಕಾರವಾರ ಜಿಲ್ಲೆ) ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ ತಾ. ೧೩-೧೨-೨೯ನೆಯ ದಿವಸ ಅ. ಡೆ. ಅವರಾದ ಶ್ರೀಮಾನ್ ಕಾಮತ ಅವರ ಹಿರಿಯತನದಲ್ಲಿ ಈ ಭಾಗದ ಶಿಕ್ಷಕರ ಸಮ್ಮೇಲನವು ನೆರವೇರಿತು. ಲೋ. ಬೋ. ವ್ಹಾಲಂಟರಿ, ಸಮಿತಿ ಶಾಲೆಗಳ ಶಿಕ್ಷಕರು ಬಂದಿದ್ದರು. ಮಾದರಿಯ ಪಾಠ, ಆಟ, ಗಾಯನಗಳಾದ ಬಳಿಕ ಹೊಸಪದ್ಧತಿಯಿಂದ ಕಲಿಸುವ ರೀತಿಗಳು ಹಾಗು ಶಿಕ್ಷಣಾಭಿವೃದ್ಧಿಗಾಗಿ ಶಿಕ್ಷಕರು ಅನುಸರಿಸುವ ಕ್ರಮುಗಳು, ಇವುಗಳ ವಿವರಣೆಯು ಚಿತ್ತಾಕರ್ಷಕವಾಗಿ ಸಾಗಿತು.

ತಿಳಿಸಿದವರು : ಶ್ರೀ. ಎಚ್. ವ್ಹಿ. ಕಾಮತ, ಹೆಡ್ ಮಾಸ್ತರರು.

ಅನಗವಾಡಿ:— (ವಿಜಾಪುರ ಜಿಲ್ಲೆ) ಧರ್ಮಶಾಲೆಯಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವು ತಾ. ೨೭-೧೨-೧೯೨೯ನೆಯ ದಿವಸ ಅ. ಡೆ. ಎ. ಇ. ಅವರಾದ ಶ್ರೀಮಾನ್ ಕಾಳಪ್ಪನವರ ಹಿರಿಯತನದಲ್ಲಿ ಸಾಗಿತು. ಕಥೆ, ವಾಚನಿಕನಿಬಂಧ, ವಾಚನ, ಕವಿತೆಗಳ ಮಾದರಿಯಪಾಠಗಳಾದ ಮೇಲೆ ಸಂಭಾಷಣೆ, ಆಟಗಳಾಗಿ ಬಾಲಕರ ಉತ್ತೇಜನಕ್ಕಾಗಿ ಒಂದು ಬೆಳ್ಳಿಯ ಪದಕವನ್ನು ಕೊಡಲಾಯಿತು.

ತಿಳಿಸಿದವರು : ಶ್ರೀ. ಜಿ. ಬಿ. ಕರ್ಜಗಿ, ಹೆಡ್ ಮಾಸ್ತರರು.

ಬೆಣ್ಣೂರು:— (ಬಾಗಲಕೋಟೆ) ಶಾಲೆಯಲ್ಲಿ ತಾ. ೧೩-೧೨-೨೯ನೆಯ ದಿವಸ ಅ. ಡೆ. ಅವರಾದ ಶ್ರೀಮಾನ್ ಕಾಳಪ್ಪನವರ ಹಿರಿಯತನದಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವಾಯಿತು. ಸಾಹೇಬರು ಗಣಿತ, ಇತಿಹಾಸಗಳ ಮಾದರಿಯ ಪಾಠಗಳನ್ನು ಕಲಿಸಿ ತೋರಿಸಿದರು. ಪ್ರೌಢಶಿಕ್ಷಣ, ಸ್ತ್ರೀಯರ ಶಿಕ್ಷಣ, ಮೊದಲಾದ ವಿಷಯಗಳ ಬಗ್ಗೆ ಚರ್ಚೆಯಾಯಿತು.

ತಿಳಿಸಿದವರು : ಶ್ರೀ. ಜ. ಕುಲಕರ್ಣಿ, ಹೆ. ಮಾ. ಬಾದರದಿನ್ನಿ.

ನವಿಲುಗುಂದ:— (ಧಾರವಾಡ ಜಿಲ್ಲೆ) ಮ್ಯುನಸಿಪಾಲಟಿಯವರು ತಮ್ಮ ಸೀಮೆಯೊಳಗಿನ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣಹೊಂದುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ೧೯೨೯ ರ ಸಪ್ಟಂಬರ ತಿಂಗಳಿನಿಂದ ಪುಕ್ಕಟೆಯಾಗಿ ಕಲಿಸುವಂತೆ ಏರ್ಪಾಡುಮಾಡಿದ್ದಾರೆ. ಇದಕ್ಕೆ ಧಾರವಾಡ ಡಿ. ಸ್ಕೂ. ಬೋ. ನ ಎಡ್ಮಿನಿಸ್ಟ್ರೇಟಿವ್ವ ಆಫೀಸರರ ಒಪ್ಪಿಗೆಯೂ ದೊರೆತಿದೆ. ಹರಿಜನ ವಿದ್ಯಾರ್ಥಿಗಳಿಗಾಗಿ ಈ ಮೊದಲೆ ಅನೇಕ ಬಗೆಯಾಗಿ ಸಹಾಯಮಾಡಿರುತ್ತಾರೆ. ಇದು ಸ್ತುತ್ಯವು.

ತಿಳಿಸಿದವರು : ಶ್ರೀ. ವ. ಗು. ಕ[illegible]ಡ, ಹೆ. ಮಾಸ್ತರರು.

ಕೊಡಗಾನೂರು:— (ವಿಜಾಪುರ ಜಿಲ್ಲೆ) ಶಾಲಾ ವಾಚನಾಲಯವನ್ನು ಕಂಡು ಶ್ರೀಮಾನ್ ಸಿ. ಕೆ. ತುಕೋಳ ಅವರು ಆನಂದ ವ್ಯಕ್ತಪಡಿಸಿದರು.

ತಿಳಿಸಿದವರು : ಶ್ರೀ. ಚಿ. ತು. ವಾಳವೇಕರರು ಸೆಕ್ರೆಟರಿ ಅವರು.

ಗದಗ:— ಕನ್ನಡ ಗಂಡುಮಕ್ಕಳ ಮೊದಲನೆಯ ನಂಬರ ಶಾಲೆಯ ವಿದ್ಯಾರ್ಥಿಗಳು ಶಿಕ್ಷಕರೊಂದಿಗೆ ಬಿಂಕದಕಟ್ಟೆಯ ಪ್ರವಾಸಮಾಡಿದರು. ಅಲ್ಲಿ 'ಹಳ್ಳಿಗಳು ಹೇಗೆ ಸ್ವತಂತ್ರವಾಗಿರಬೇಕು' ಎಂಬ ವಿಷಯದ ಮೇಲೆ ಮಾತಾಡಿದರು. ಕಳಸಾಪುರ ಪ್ರವಾಸದಲ್ಲಿ ಜೈನರ ದಿಗಂಬರ ಭವ್ಯಮೂರ್ತಿಗಳನ್ನು ನೋಡಿ ಹಲವು ಸಂಗತಿಗಳನ್ನು ತಿಳಿದುಕೊಂಡರು.

ತಿಳಿಸಿದವರು : ಶ್ರೀ. ಶಿ. ಅ. ಸಿದ್ಧರಾಮೇಶ್ವರ, ಹೆ. ಮಾಸ್ತರರು.

ಬನಹಟ್ಟಿ:— (ನವಿಲುಗುಂದ ತಾಲೂಕ) ಶಾಲೆಯ ವಿದ್ಯಾರ್ಥಿಗಳು ಕಳೆದ ಡಿಶಂಬರ ತಿಂಗಳಲ್ಲಿ ಅ. ಡೆ. ಅವರಾದ ಶ್ರೀಮಾನ್ ಕೋರಬು ಅವರ ಹಿರಿಯತನದಲ್ಲಿ 'ತ್ರಿಮೂರ್ತಿಗಳ ಸೋಲು' ಎಂಬ ಚಿಕ್ಕ ನಾಟಕವನ್ನು ಅಭಿನಯಿಸಿದರು. ನೋಡಲು ಸುತ್ತುಮುತ್ತಲಿನ ಹಳ್ಳಿಗಳ ಶಿಕ್ಷಕರೂ ರೈತರೂ ಬಂದಿದ್ದರು. ಶ್ರೀ. ಭಾವಿ, ಮತ್ತು ಶ್ರೀ. ಗೌಡಪ್ಪಗೌಡರ ಮೊದಲಾದ ಶಿಕ್ಷಕರ ಚಟುವಟಿಕೆಗಳಿಗೆ ತಕ್ಕಂತೆ ಪ್ರೋತ್ಸಾಹಿಸಿದರು.

ತಿಳಿಸಿದವರು : ಶ್ರೀ. ಚ. ಬ. ಅಂಗಡಿ.

ಹುನಗುಂದ:— (ವಿಜಾಪುರ ಜಿಲ್ಲೆ) ಭಾಗದ ಶಿ. ಶಿ. ಸಮ್ಮೇಲನವು ೩೦-೧೨-೧೯೨೩ ನೆಯ ದಿವಸ ಅ. ಡೆ. ಅವರಾದ ಶ್ರೀಮಾನ್ ಗುಡಿಸಾಗರರ ಹಿರಿಯತನದಲ್ಲಿ ಹುನಗುಂದ ಶಾಲೆಯಲ್ಲಿ ನೆರವೇರಿತು. ಆಟ-ವಿನೋದಗಳು ಆದಬಳಿಕ ಶಾಸ್ತ್ರೀಯ ವಿಷಯ, ಕವಿತೆ, ಬರೆಹಗಳಿಗಾಗಿ ಪಾತಗಳು ಸಾಗಿದವು. ಹಳ್ಳಿಯ ಜೀವನ'ದ ಬಗೆಗೆ ಭಾಷಣವಾಯಿತು. ಅಧ್ಯಕ್ಷರು ಶಿಕ್ಷಣದ ಮಹತ್ವ ಹಾಗು ಶಿಕ್ಷಕರ ಕರ್ತವ್ಯಗಳನ್ನು ತಿಳಿಸಿಹೇಳಿದರು.

ತಿಳಿಸಿದವರು : ಹುನಗುಂದ ಶಾಲೆಯ ಹೆಡ್‌ಮಾಸ್ತರರು.

ಹಳಿಗೆ:— (ಕಾರವಾರ ತಾಲೂಕು) ಶಾಲೆಯಲ್ಲಿ ೨೫-೧೨-೨೩ ನೆಯ ದಿವಸ ವಾಚನಾಲಯದ ಸ್ಥಾಪನೆಗಾಗಿ ಸಭೆ ನೆರೆಯಿತು. ಶ್ರೀ. ನಾಯಿಕ ಸಾಬುರಾಯರು ೬ ರೂ. ಕೊಟ್ಟರು. ಬಾಲಿಕೆಯರಿಗೆ ಶ್ರೀ. ಅಂಬೆ ಸುಶೀಲಾ-ಬಾಯಿಯವರು ಗಾಯನ ಸಂಭಾಷಣೆಗಳನ್ನು ಉತ್ತಮ ರೀತಿಯಲ್ಲಿ ಕಲ್ಪಿಸಿ-ದ್ದರು. ಹೆಡ್‌ಮಾಸ್ತರರಾದ ಶ್ರೀ. ವಿ. ರಾ. ಪ್ರಭು ಅವರ ಪ್ರಯತ್ನವು ಜೆನ್ನಾಗಿದೆ.

ತಿಳಿಸಿದವರು : ಶಾಲೆಯ ಸರ ಪಂಚರಾದ ಶ್ರೀ. ಶಿ. ವಿ. ಗಾಯತೋಂಡೆ ಅವರು.

ಸಾಕ್ಷರಿಗಳಾಪ ಪ್ರಬುದ್ಧರಿಗಾಗಿ

(ಒಂದು ಚಿಕ್ಕ ಕಥೆ)

ಒಂದು ಊರಲ್ಲಿ **ಹೊನ್ನಪ್ಪ**ನೆಂಬ ಒಬ್ಬ ಸಾವುಕಾರನಿದ್ದನು. ಅವನು ತನ್ನ ಹೆಸರಿಗೆ ತಕ್ಕಂತೆ ಬಹಳ ಹೊನ್ನುಳ್ಳವನಾಗಿದ್ದನು. ಅವನ ಮನೆಯಲ್ಲಿ ಒಬ್ಬ ಆಳು ಇದ್ದನು; ಚಿನ್ನದಂಥ ಗುಣವುಳ್ಳವನಾದ್ದರಿಂದ ಅವನನ್ನು ಎಲ್ಲರೂ **ಚಿನ್ನಪ್ಪ** ಎನ್ನುತ್ತಿದ್ದರು. ಹೊನ್ನಪ್ಪನಿಗೆ ಮುತ್ತಿನಂಥ ಒಬ್ಬ ಮಗನಿದ್ದನು. ಅವನ ಹೆಸರು **ಮುತ್ತಪ್ಪ.**

ಮುತ್ತಪ್ಪನು ದೊಡ್ಡವನಾದ ಬಳಿಕ ವ್ಯಾಪಾರಮಾಡಿ ಹಣ ಗಳಿಸಬೇಕೆಂದು ದೂರದೇಶಕ್ಕೆ ಹೋದನು; ಮಾರವಾಡಿಗಳು ನಮ್ಮತ್ತ ಬರುತ್ತಾರಲ್ಲ; ಹಾಗೆ.

ಮುತ್ತಪ್ಪನು ಪರಸ್ಥಳಕ್ಕೆ ಹೋಗಿ ಎಷ್ಟೋ ವರ್ಷಗಳಾಗಿ ಹೋದವು. ಯಾವಾಗಲಾದರೂ ಒಮ್ಮೆ, ವರುಷ ಎರಡು ವರುಷಕ್ಕೆ ಒಮ್ಮೆ, ತಂದೆಗೆ ಚೆನ್ನಾಗಿದ್ದೇನೆಂದು ಪತ್ರ ಬರೆಯುತ್ತಿದ್ದನು.

ಹೊನ್ನಪ್ಪನು ಚಿನ್ನಪ್ಪನೇ ತನ್ನ ಮಗನೆಂದು ತಿಳಿದನು. ಅವನಿಗೆ ಚಿನ್ನಪ್ಪನ ಮೇಲೆ ಅಷ್ಟು ವಿಶ್ವಾಸ. ಮನೆಯ ಒಳಗೂ ಹೊರಗೂ ಚಿನ್ನಪ್ಪನೇ ಎಲ್ಲ ಕೆಲಸಗಳನ್ನು ಮಾಡುವನು.

ಕೊಡುವದು ಕೊಳ್ಳುವದು ಎಲ್ಲವೂ ಚಿನ್ನಪ್ಪನದೇ ಕೆಲಸ. ಚಿನ್ನಪ್ಪನು ಕೂಡ ಹೊನ್ನಪ್ಪನೇ ತನ್ನ ಧನಿ, ತನ್ನ ತಂದೆ, ತನ್ನ ಸರ್ವಸ್ವ, ಎಂದು ತಿಳಿದಿದ್ದನು.

ಹೊನ್ನಪ್ಪನಿಗೆ ಹೆಚ್ಚು ವಯಸ್ಸಾಗುತ್ತ ಬಂದಿತು ಕೂದಲು ಬೆಳ್ಳಗಾಯಿತು ; ಹಲ್ಲುಗಳು ಒಂದೊಂದಾಗಿ ಕಳಚಿ ದವು; ಕಿವಿ ಕೇಳಿಸದಾಯಿತು; ಕಣ್ಣು ಮಂದವಾಯಿತು. ಚಿನ್ನಪ್ಪನು ಕೈಹಿಡಿದು ಕರೆದುಕೊಂಡು ಹೋದರೇನೆ ಹೊನ್ನಪ್ಪನು ಹೊರಗೆ ಹೋಗಬಲ್ಲನು.

ಹೀಗಿರುವಾಗ ಒಂದುದಿನ ಹೊನ್ನಪ್ಪನಿಗೆ ಜ್ವರ ಬಂದಿತು. ಆಗ ಅವನು ಊರೊಳಗಿನ ನಾಲ್ಕುಜನ ಬಲ್ಲವರನ್ನು ಕರೆಯಿಸಿ ಒಂದು ಮೃತ್ಯುಪತ್ರವನ್ನು ಬರೆಯಿಸಿದನು. ಅದರಲ್ಲಿ ತಾನು ಚಿನ್ನಪ್ಪನನ್ನೆ ಕಿರಿಯಮಗನೆಂದು ತಿಳಿದಿರುವೆನೆಂದೂ ತನ್ನ ಎಲ್ಲ ಆಸ್ತಿಯು ಅವನಿಗೇ ಹೋಗಬೇಕೆಂದೂ ಬರೆಯಿಸಿದನು. ತನ್ನ ಹಿರಿಯ ಮಗನಾದ ಮುತ್ತಪ್ಪನು ಊರಿಗೆ ಬಂದರೆ ಅವನು ತನಗೆ ಬೇಕಾದ ಒಂದೇ ಒಂದು ಮಾತನ್ನು ಮಾತ್ರ ಚಿನ್ನಪ್ಪನನ್ನು ಕೇಳಿ ಪಡೆಯಬಹುದೆಂದು ಬರೆಯಿಸಿ ಮೃತ್ಯುಪತ್ರವನ್ನು ಮುಗಿಸಿದನು.

ಮುಂದೆ ಕೆಲವು ದಿನಗಳಲ್ಲಿಯೇ ಹೊನ್ನಪ್ಪನು ತೀರಿ ಕೊಂಡನು. ಚಿನ್ನಪ್ಪನಿಂದ ತಂದೆಯ ಮರಣದ ಸುದ್ದಿಯನ್ನು ತಿಳಿದು ಮುತ್ತಪ್ಪನು ಊರಿಗೆ ಬಂದನು. ಚಿನ್ನಪ್ಪನು ಮೃತ್ಯು ಪತ್ರವನ್ನು ತೋರಿಸಿದನು. ಅದರಲ್ಲಿ ತಂದೆಯ ನಾಲ್ಕಾರು ಲಕ್ಷದ ಆಸ್ತಿಯೆಲ್ಲವೂ ಚಿನ್ನಪ್ಪನದೆಂದು ಬರೆದಿರುವದನ್ನು ತಿಳಿದು ಮುತ್ತಪ್ಪನು ಮರಮರ ಮರುಗಿದನು. ಅವನಿಗೆ ಚಿನ್ನಪ್ಪನ ಮೇಲೆ ತುಸು ಬೇಸರವೂ ಆಯಿತು. ಆದರೆ ಮಾಡುವದೇನು ?

ಅದೇ ಊರೊಳಗೆ ಬುದ್ಧಿವಂತಪ್ಪನೆಂಬ ಒಬ್ಬ ಗೃಹಸ್ಥನಿದ್ದನು. ಅವನು ಬುದ್ಧಿವಂತನಿದ್ದನಿಷ್ಟೇ ಅಲ್ಲ, ನೀತಿವಂತನೂ

ಆಗಿದ್ದನು. ಆದುದರಿಂದ ಊರವರೆಲ್ಲರೂ ತಮ್ಮ ತಮ್ಮ ಅನುಭವ ಆಪತ್ತುಗಳ ಕಾಲದಲ್ಲಿ ಅವನ ಬಳಿಗೆ ಹೋಗಿ, ತಮ್ಮ ತೊಡಕು ತೊಂದರೆಗಳನ್ನೆಲ್ಲ ಹೇಳಿ, ತಕ್ಕ ಸಹಾಯ ಸಲಹೆಗಳನ್ನು ಪಡೆಯುತ್ತಿದ್ದರು. ಮುತ್ತಪ್ಪನು ತನ್ನ ತಂದೆಯ ಮೃತ್ಯುಪತ್ರವನ್ನು ತಕ್ಕೊಂಡು ಸಂಗಡ ಚಿನ್ನಪ್ಪನನ್ನು ಕರೆದು ಕೊಂಡು ಬುದ್ಧಿವಂತಪ್ಪನ ಮನೆಗೆ ಹೋದನು. ಅವನು ಎಲ್ಲವನ್ನೂ ಕೇಳಿಕೊಂಡು ಮೃತ್ಯುಪತ್ರವನ್ನು ಓದಿ ನೋಡಿ ನಕ್ಕು 'ಮುತ್ತಪ್ಪಾ, ಚಿನ್ನಪ್ಪಾ, ಇದರಲ್ಲಿ ಅನ್ಯಾಯವೇನಿದೆ? ಹೊನ್ನಪ್ಪನು ಹೊನ್ನಿನಂಥ ಕೆಲಸ ಮಾಡಿದ್ದಾನೆ' ಎಂದನು.

ಮುತ್ತಪ್ಪನ ಮೋರೆ ಸಣ್ಣದಾಯಿತು. ನೀವೂ ಹೀಗೆಂದ ಮೇಲೆ ಉಳಿಯಿತಿನ್ನೇನು? ಎಂದು ನಿರಾಶೆಯ ಉಸಿರು ಬಿಟ್ಟನು. ಬುದ್ಧಿವಂತಪ್ಪನು "ತಮ್ಮಾ, ನಿನಗೆ ನಿನ್ನ ತಂದೆಯು ಹೇಳಿಕೆ ತಿಳಿಯದಂತೆಯೇ ನನ್ನ ಮಾತೂ ಗೊತ್ತಾಗಲಿಲ್ಲ. ನೀನು ಚಿನ್ನಪ್ಪನಿಂದ ಒಂದು ಮಾತನ್ನು ಕೇಳಿ ಪಡೆಯಬಹುದೆಂದು ಮೃತ್ಯುಪತ್ರದಲ್ಲಿ ಇರುವದಲ್ಲವೇ? 'ಚಿನ್ನಪ್ಪಾ, ನೀನು ನನ್ನ ತಂದೆಯು ಆಳಾಗಿದ್ದಂತೆಯೇ ನನಗೂ ಆಳಾಗಿ ಹಿಂದಿನಂತೆಯೇ ನಡೆದುಕೊಂಡು ಬಾ' ಎಂಬ ಮಾತೊಂದನ್ನು ಅವನನ್ನು ಕೇಳಿಕೊ. ಅವನೂ ಅದನ್ನು ಅಲ್ಲಗಳೆಯಲಾರನು" ಎಂದನು. ಬುದ್ಧಿವಂತಪ್ಪನ ಬುದ್ಧಿಯ ಮಾತಿನಿಂದ ಎಲ್ಲರಿಗೂ ಆನಂದವಾಯಿತು. ಮುತ್ತಪ್ಪನಿಗೆ ಚಿನ್ನದಂಥ ಚಿನ್ನಪ್ಪನೂ ದೊರೆದನು. ಹೊನ್ನಪ್ಪನ ಹೊನ್ನೂ ದೊರೆಯಿತು.

ವಿಷಯ.

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವಡಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. "ಈ ಮಾಸಪತ್ರಿಕೆಯು ಪ್ರತಿತಿಂಗಳ ಕೊನೆಯವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ವರ್ಗಕ್ಕೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ ಅಂಚೆಯ ಚೀಟಿಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಸುವರ್ಣವಲ್ಲಿಪತ್ರಿಕೆ

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿಾಶನ್ ಬೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಅರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೬ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ಬೊರೆಯುವವು.

ಫೆಬ್ರುವರಿ ೧೯೪೩ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವು ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಟ್ರೇನಿಂಗ ಕಾಲೇಜಗಳಲ್ಲಿಯ ಜಮುವಟಿಕೆಗಳು	೧
೨.	ಗ್ರಾಮ ವಿಚಾರಣೆಯ ಪ್ರಶ್ನೆಮಾಲಿಕೆ	೪
೩.	ಸಾಹಿತ್ಯ ಸೇವಕರಾದ ಕುರಡಿ ನಾರಾಯಣರಾಯರು ..	೧೩
೪.	ಫಲಾಹಾರ	೧೬
೫.	ಪ್ರಾಥಮಿಕ ಶಾಲಾಪ್ರಮಾಣ ಪತ್ರ ಪರೀಕ್ಷೆ—೧೯೪೩ ..	೧೮
೬.	ಪ್ರಕಟನೆ	೨೫
೭.	ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಯ ಕಾರ್ಯಕ್ರಮಗಳು ..	೨೬
೮.	ಪತ್ರಗಳ ಮುಖ್ಯಾಂಶಗಳು	೨೯
೯.	ಗ್ರಾಮಸಂಘಟನೆ (ಪ್ರಬುದ್ಧರಿಗಾಗಿ)	೩೧

ಬಿಡಿ ಸಂಚಿಕೆಗೆ ನಾಲ್ಕು ಅಣೆಗಳು. ವಾರ್ಷಿಕ ಚಂದಾ ಮಣಿ ೨ ರೂಪಾಯಿಗಳು ಮಾತ್ರ.

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office.

END

END

CONTD IN
NEXT ROLL

CONTD IN
NEXT ROLL